# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಫೆಬ್ರವರಿ 10, 2022

ಸಂಪುಟ : 48 ಸಂಚಿಕೆ : 271 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## 4,500 ಕೋ ರೂ.ಗಳ ಜಲಜೀವನ್ ಯೋಜನೆಗೆ ರಾಜ್ಯ ಸಂಪುಟದ ಅಸ್ತು



ಬೆಂಗಳೂರು, ಫೆ. 9 - ಗ್ರಾಮೀಣ ಪ್ರದೇಶದ ಮನೆ ಗಳಿಗೆ 4,500 ಕೋಟಿ ರೂ. ವೆಚ್ಚದಲ್ಲಿ ನಲ್ಲಿ ನೀರು ಒದಗಿಸುವ ಜಲಜೀವನ್ ಯೋಜನೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ.


ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಕೇಂದ್ರ ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಕಲ್ಪಿಸುವ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ ಎಂದಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರ ತಲಾ ಶೇ.45 ರಷ್ಟು ಹಾಗೂ ಸ್ಥಳೀಯ ಮೂಲಗಳಿಂದ ಶೇ.10 ರಷ್ಟು ಹಣವನ್ನು ಭರಿಸಿ, ಯೋಜನೆ ಕೈಗೆತ್ತಿಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಸ್ಥಳೀಯ ಮೂಲಗಳಿಂದ ಹಣ ಭರಿಸಲು ಸಾಧ್ಯವಾಗದ ಕಾರಣ, ಸರ್ಕಾರವೇ ಆ ಹಣವನ್ನು ಭರಿಸಲು ತೀರ್ಮಾನಿಸಿದೆ. ಮುಂದಿನ 2024 ರ ವೇಳೆಗೆ ಯೋಜನೆ ಪೂರ್ಣಗೊಳಿಸಬೇಕಾಗಿ ರುವುದ ರಿಂದ ಅಗತ್ಯ ಹಣ ಸಂಗ್ರಹಣೆಗಾಗಿ ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆಯಲು ಸಭೆ ತೀರ್ಮಾನಿಸಿದೆ ಎಂದರು.

ರಾಜ್ಯದ ಗ್ರಾಮೀಣ ಭಾಗದ ಎಲ್ಲಾ ಮನೆಗಳಿಗೂ ನಲ್ಲಿ ನೀರು ಕಲ್ಪಿಸುವ ಯೋಜನೆ ಒಟ್ಟಾರೆ 9,200 ಕೋಟಿ ರೂ.ಗಳ ಅಗತ್ಯತೆಯಿದೆ. ಮೊದಲ ಹಂತದಲ್ಲಿ ಎಲ್ಲಿ ಸುಲಭವಾಗಿ ಜಲಮೂಲಗಳು (2ನೇ ಪುಟಕ್ಕೆ)

## ಬಿಕಿನಿ, ಜೀನ್ಸ್ ಯಾವುದು ಬೇಕಾದರೂ ಧರಿಸುವ ಸ್ವಾತಂತ್ರ್ಯ ಇದೆ: ಪ್ರಿಯಾಂಕಾ



ನವದೆಹಲಿ, ಫೆ. 9 - ಹಿಜಾಬ್ ವಿವಾದ ಭುಗಿಲೆದ್ದಿರುವ ನಡುವೆ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ, ಮಹಿಳೆಗೆ ತನಗಿಷ್ಟ ಬಂದಿರುವುದನ್ನು ಧರಿಸುವ ಸ್ವಾತಂತ್ರ್ಯ ಇದೆ. ಅದು ಬಿಕಿನಿ, ಘೂಂಘಟ್, ಜೀನ್ಸ್ ಇಲ್ಲವೇ ಹಿಜಾಬ್ ಯಾವುದು ಬೇಕಾದರೂ ಆಗಿರಬಹುದು ಎಂದಿದ್ದಾರೆ.

ಈ ಹಕ್ಕನ್ನು ಸಂವಿಧಾನದಲ್ಲಿ ನೀಡಲಾಗಿದೆ. ಮಹಿಳೆಯರಿಗೆ ಪೀಡಿಸುವುದನ್ನು ನಿಲ್ಲಿಸಿ ಎಂದವರು ಹೇಳಿದ್ದಾರೆ.

ಲಖ್ನೌದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಿಯಾಂಕಾರನ್ನು ಈ ಬಗ್ಗೆ ಪ್ರಶ್ನಿಸಿದಾಗ, ಮಹಿಳೆ ತನಗೆ ಇಷ್ಟವಾಗಿರುವುದನ್ನು ಧರಿಸುವ ಸ್ವಾತಂತ್ರ್ಯ ಹೊಂದಿದ್ದಾಳೆ ಎಂದು ಪುನರುಚ್ಚರಿಸಿದರು.

ಈ ವಿಷಯದಲ್ಲಿ ಯಾವುದೇ ರಾಜಕೀಯ ಇರಬಾರದು. ಯಾರೂ ರಾಜಕೀಯ ಮಾಡಬಾರದು. ಮಹಿಳೆ ಏನು ಧರಿಸಬೇಕು ಎಂದು ಹೇಳುವ ಅಧಿಕಾರ (2ನೇ ಪುಟಕ್ಕೆ)

### ಬಿಕಿನಿ ಕೀಳು ಮಟ್ಟದ ಶಬ್ದ

ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿಕೆಯನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಬಿಕಿನಿ ಎಂದು ಹೇಳಿರುವುದು ಅತ್ಯಂತ ಕೀಳುಮಟ್ಟದ ಶಬ್ದ ಎಂದಿದ್ದಾರೆ.



ವಿದ್ಯಾರ್ಥಿನಿಯರು ಸಮವಸ್ತ್ರ/ಮೈ ತುಂಬಾ ಬಟ್ಟೆ ಹಾಕಿಕೊಂಡರೆ ಶೋಭೆ ಎಂದವರು ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಬಿಕಿನಿ ಮತ್ತು ಸಮವಸ್ತ್ರಕ್ಕಿರುವ ವ್ಯತ್ಯಾಸ ಯಾಕೆ ಗೊತ್ತಿಲ್ಲ ಎಂದು ಆಲೋಚಿಸುತ್ತಿರುವಾಗ ಗೊತ್ತಾಯಿತು, 'ಅವರು ರಾಹುಲ್ ಗಾಂಧಿ ಸಹೋದರಿ' ಎಂದು ರೇಣುಕಾಚಾರ್ಯ ಲೇವಡಿ (2ನೇ ಪುಟಕ್ಕೆ)

## ಹರಿಹರದಲ್ಲಿ ಗಲಾಟೆ: 6 ಪ್ರಕರಣ ದಾಖಲು

### ಐಜಿಪಿ ಸತೀಶ್ ಕುಮಾರ್ ಭೇಟಿ ನೀಡಿ ಪರಿಶೀಲನೆ, ಎಚ್ಚರ ವಹಿಸಲು ಸೂಚನೆ

ಹರಿಹರ, ಫೆ. 9- ನಗರದಲ್ಲಿ ನಿನ್ನೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವ ರಣದಲ್ಲಿ ಹಿಜಾಬ್ ಧರಿಸುವ ವಿವಾದದ ವಿಚಾರಕ್ಕೆ ಎರಡು ಕೋಮಿನ ನಡುವೆ ನಡೆದ ಗಲಾಟೆಯ ಬಗ್ಗೆ ದಾವಣಗೆರೆ ಪೂರ್ವ ವಲಯ ಐಜಿಪಿ ಸತೀಶ್ ಕುಮಾರ್ ರವರು ಕಾಲೇಜು ಆವರಣದಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದಾರೆ.



ಹಿರಿಯ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದಿರುವ ಅವರು, ಮತ್ತೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರ ವಹಿಸಲು ತಿಳಿಸಿದ್ದಾರೆ.

ಘಟನೆಯ ಹಿನ್ನೆಲೆಯಲ್ಲಿ ಹೆಚ್ಚಿನ ಪೊಲೀಸ್ ಪಡೆಗಳನ್ನು ನಗರದಲ್ಲಿ ನಿಯೋಜಿಸಲಾಗಿದೆ. ಪೊಲೀಸ್ ಸಿಬ್ಬಂದಿ ವಿವಿಧ ಬಡಾವಣೆಗಳಲ್ಲಿ ಪಥಸಂಚಲನ ನಡೆಸಿದ್ದಾರೆ. ಕೆಲ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಪಡೆಗಳನ್ನು ನಿಯೋಜಿಸಲಾಗಿದೆ.

ಘಟನೆಯ ಹಿನ್ನೆಲೆಯಲ್ಲಿ ಬುಧವಾರ ಕಾಲೇಜಿಗೆ ಭೇಟಿ (2ನೇ ಪುಟಕ್ಕೆ)

### ಗೇಟ್ ಇಲ್ಲದಿದ್ದರೆ ದೊಡ್ಡ ಅನಾಹುತ ಆಗುತ್ತಿತ್ತು

ನಮ್ಮ ಕಾಲೇಜು ಮುಂಭಾಗದಲ್ಲಿ ಗೇಟ್ ಇಲ್ಲದೇ ಹೋಗಿದ್ದರೆ ಬಹಳ ದೊಡ್ಡ ಪ್ರಮಾಣದಲ್ಲಿ ಅನಾಹುತ ಆಗುತ್ತಿತ್ತು. ಮಕ್ಕಳಿಗೆ ರಕ್ಷಣೆ ನೀಡಲು ಸಾಧ್ಯವಾಗುತ್ತಿರಲಿಲ್ಲ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ವಿರೂಪಾಕ್ಷಪ್ಪ ಹೇಳಿದ್ದಾರೆ. ನಿನ್ನೆ ಘಟನೆ ನೋಡಿ ದರೆ, ಮುಂದೆ ಪ್ರತಿನಿತ್ಯವೂ ಮಕ್ಕಳಿ ಗೆ ಯಾವ ರೀತಿಯಲ್ಲಿ ಶಿಕ್ಷಣ ನೀಡಬೇಕು ಎಂದು ಗೊಂದಲ ಸೃಷ್ಟಿ ಯಾಗಿದೆ ಎಂದವರು ಹೇಳಿದ್ದಾರೆ.

ನಿನ್ನೆ ನಡೆದ ಘಟನೆಯ ಎಲ್ಲಾ ವಿಚಾರಗಳನ್ನು ಐಜಿಪಿ, ಎಸ್ಪಿ, ಶಾಸಕರ ಗಮನಕ್ಕೆ ತರಲಾಗಿದೆ. ಅವರು ಯಾವ ರೀತಿಯಲ್ಲಿ ಮಾರ್ಗ ದರ್ಶನ ನೀಡುತ್ತಾರೋ ಅಂದು ಕಾಲೇಜು ಪ್ರಾರಂಭ ಮಾಡಲಾಗುತ್ತದೆ ಎಂದರು.




ವಿದ್ಯಾರ್ಥಿಗಳಿಲ್ಲದೆ ಬಿಕೋ ಎನ್ನುತ್ತಿದ್ದ ದಾವಣಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

### ಫೆ. 11ರವರೆಗೆ ನಿಷೇಧಾಜ್ಞೆ ವಿಸ್ತರಣೆ

'ಹಿಜಾಬ್' ಹಾಗೂ 'ಕೇಸರಿ ಶಾಲು' ವಿವಾದದ ಹಿನ್ನೆಲೆಯಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡಲು ಮಹಾನಗರ ಪಾಲಿಕೆ ಹಾಗೂ ಹರಿಹರ ನಗರಸಭೆ ವ್ಯಾಪ್ತಿಯಲ್ಲಿ ಬುಧವಾರ ಮಧ್ಯರಾತ್ರಿವರೆಗೆ ಹೇರಿದ್ದ ನಿಷೇಧಾಜ್ಞೆಯನ್ನು ಫೆ. 11ರ ಮಧ್ಯರಾತ್ರಿ 12ರವರೆಗೆ ವಿಸ್ತರಿಸಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶ ಹೊರಡಿಸಿದ್ದಾರೆ. ಇದರೊಟ್ಟಿಗೆ ಹರಿಹರ ನಗರಸಭೆ ವ್ಯಾಪ್ತಿಗಷ್ಟೇ ಸೀಮಿತವಾಗಿದ್ದ ನಿಷೇಧಾಜ್ಞೆಯನ್ನು ಇದೀಗ ಮಲೇಬೆನ್ನೂರು ಸೇರಿದಂತೆ ಇಡೀ ತಾಲ್ಲೂಕಿನಾದ್ಯಂತ ವಿಸ್ತರಿಸಲಾಗಿದೆ.

### ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟ ಬೇಡ

ಪೋಷಕರು ಸಾಲ - ಸೋಲ ಮಾಡಿ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಾರೆ. ರಾಜಕೀಯವನ್ನು ವಿದ್ಯಾರ್ಥಿಗಳ ಮೇಲೆ ಪ್ರಯೋಗಿಸಬಾರದು. ಪ್ರಚೋದನೆಯಿಂದ



ಅವರ ಭವಿಷ್ಯ ಹಾಳು ಮಾಡಬಾರದು ಎಂದು ಶಾಸಕ ಎಸ್. ರಾಮಪ್ಪ ಮನವಿ ಮಾಡಿಕೊಂಡಿದ್ದಾರೆ. ಹರಿಹರ ನಗರದಲ್ಲಿ ಹಿಂದಿನಿಂದಲೂ ಎಲ್ಲಾ ವರ್ಗದವರೂ ಸಹ ಸಹೋದರರಂತೆ ಪ್ರೀತಿ, ವಿಶ್ವಾಸದಿಂದ ಜೀವನ ಮಾಡಿಕೊಂಡು ಬಂದಿದ್ದಾರೆ. ಶಾಲೆಯಲ್ಲಿ ಎಲ್ಲಾ ವರ್ಗದ ಮಕ್ಕಳೂ ಸಹ ಭೋಜನ ಮಾಡಿಕೊಂಡು ಬಂದಿರುತ್ತಾರೆ. ವಿದ್ಯಾರ್ಥಿಗಳು ಸಹ ನಿನ್ನೆ ಆಗಿರೋದು ಸಣ್ಣ ಘಟನೆ ಎಂದು ಭಾವಿಸಿಕೊಂಡು ಮುಂದೆ ತಮ್ಮ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಿ ಎಂದು ಹೇಳಿದರು.

## ಕಾಲೇಜುಗಳಲ್ಲಿ ನೀರವ ಮೌನ

ದಾವಣಗೆರೆ, ಫೆ.9- ಕಳೆದ ಕೆಲ ದಿನಗಳಿಂದ ಹಿಜಾಬ್ ಹಾಗೂ ಕೇಸರಿ ಶಾಲುಗಳ ವಿವಾದದ ಕೇಂದ್ರಗಳಾಗಿ ಮಾರ್ಪಾಡಾಗಿದ್ದ ಕಾಲೇಜುಗಳಲ್ಲಿ ಬುಧವಾರ ನೀರವ ಮೌನ ಆವರಿಸಿತ್ತು.

ಹರಿಹರ ಹಾಗೂ ದಾವಣಗೆರೆ ಕಾಲೇಜುಗಳೂ ಸೇರಿದಂತೆ ರಾಜ್ಯಾದ್ಯಂತ ಹಿಜಾಬ್ ಹಾಗೂ ಕೇಸರಿ ಶಾಲು ವಿವಾದ ಉಲ್ಬಣಿಸಿ, ಪೋಷಕರು ಹಾಗೂ ವಿದ್ಯಾರ್ಥಿಗಳ ಆತಂಕಕ್ಕೆ ಕಾರಣವಾಗಿತ್ತು.

ಪರಿಸ್ಥಿತಿ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಕಾಲೇಜುಗಳಿಗೆ ಮೂರು ದಿನಗಳ ರಜೆ ಘೋಷಿಸಿತ್ತು. ಇತ್ತ ಜಿಲ್ಲಾಡಳಿತವೂ ಸಹ 144ನೇ ಸೆಕ್ಷನ್ ಅಡಿಯಲ್ಲಿ ದಾವಣಗೆರೆ ಹಾಗೂ ಹರಿಹರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿತ್ತು.

ಈ ಹಿನ್ನೆಲೆಯಲ್ಲಿ ಕಾಲೇಜುಗಳು ವಿದ್ಯಾರ್ಥಿಗಳಿಲ್ಲದೆ ಬಿಕೋ ಎನ್ನುತ್ತಿದ್ದವು. ಇತ್ತ 9 ಹಾಗೂ 10ನೇ ತರಗತಿ ಮಕ್ಕಳಿಲ್ಲದೆ ಶಾಲೆಗಳೂ ಮೌನ ವಹಿಸಿದ್ದವು. ಕೆಲ ಖಾಸಗಿ ಸಂಸ್ಥೆಗಳ ಪ್ರಾಥಮಿಕ ಶಾಲೆಗಳಿಗೂ ರಜೆ ನೀಡಲಾಗಿತ್ತು.

ಶಾಲೆಗಳಲ್ಲಿ ಶಿಕ್ಷಕರು ಹಾಗೂ ಕಾಲೇಜುಗಳಲ್ಲಿ ಉಪನ್ಯಾಸಕರು ಹಾಗೂ ಸಿಬ್ಬಂದಿಗಳು ಮಾತ್ರ ಕಾಲೇಜುಗಳಿಗೆ ಆಗಮಿಸಿದ್ದರು. ಪೊಲೀಸ್ ಗಸ್ತು ವಾಹನಗಳು ಕಾಲೇಜುಗಳತ್ತ ಬಂದು ಹೋಗುತ್ತಿದ್ದುದು ಕಂಡು ಬಂತು.

### ಎಸ್ಟಿ ಮೀಸಲಾತಿ ಹೆಚ್ಚಳ :

## ಅಹೋರಾತ್ರಿ ಸತ್ಯಾಗ್ರಹಕ್ಕೆ ರಾಜನಹಳ್ಳಿ ಶ್ರೀಗಳ ನಿರ್ಧಾರ



ಮಲೇಬೆನ್ನೂರು, ಫೆ. 9- ಎಸ್ಟಿ ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಶೇ.3 ರಿಂದ ಶೇ.7.5 ಕ್ಕೆ ಹೆಚ್ಚಳ ಮಾಡುವಂತೆ ಒತ್ತಾಯಿಸಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರದಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುವುದಾಗಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಪ್ರಕಟಿಸಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಹಮ್ಮಿಕೊಂಡಿದ್ದ ಶ್ರೀಮಠದ 24 ನೇ ವಾರ್ಷಿಕೋತ್ಸವ ಮತ್ತು ವಾಲ್ಮೀಕಿ ರಥೋತ್ಸವದ ಅಂಗವಾಗಿ ಲಿಂಗೈಕ್ಯ ಶ್ರೀ ಪುಣ್ಯಾನಂದ ಪುರಿ (2ನೇ ಪುಟಕ್ಕೆ)

## ಮೈಲಾರ ಜಾತ್ರೆ : ನಿರ್ಬಂಧ



ಹೂವಿನಹಡಗಲಿ, ಫೆ.9 - ತಾಲ್ಲೂಕಿನ ಸುಕ್ಷೇತ್ರ ಮೈಲಾರದಲ್ಲಿ ಜರು ಗುವ ಈ ಬಾರಿಯ ಜಾತ್ರಾ ಮಹೋತ್ಸವವನ್ನು ಧಾರ್ಮಿಕ ವಿಧಿ ವಿಧಾನ ಗಳಿಗೆ ಮಾತ್ರ ಅವಕಾಶ ಮಾಡಿಕೊಟ್ಟು ಭಕ್ತರ ಭಾಗವಹಿಸುವಿಕೆಯನ್ನು ನಿರ್ಬಂಧಿಸಲು ವಿಜಯನಗರ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಹೇಳಿದರು.

ಜಾತ್ರಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಸರ್ವರೂ ಸರ್ಕಾರದ ಕ್ರಮವನ್ನು ಪಾಲಿಸಬೇಕು. ಅಲ್ಲದೇ ಕೊರೊನಾ (5ನೇ ಪುಟಕ್ಕೆ)

## ಹಿಜಾಬ್ ಸಂಘರ್ಷಕ್ಕೆ ಸರ್ಕಾರದ ಪ್ರಚೋದನೆ

### ಸಚಿವರ ಪುತ್ರನಿಂದ ಕೇಸರಿ ಶಾಲು ಪೂರೈಕೆ : ಡಿಕೆಶಿ

ಬೆಂಗಳೂರು, ಫೆ. 9- ರಾಜ್ಯದಲ್ಲಿ ಭುಗಿಲೆದ್ದಿರುವ ಹಿಜಾಬ್ ಸಂಘರ್ಷಕ್ಕೆ ಸರ್ಕಾರವೇ ಪ್ರಚೋದನೆ ನೀಡುತ್ತಿದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಆರೋಪ ಮಾಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಕೇಸರಿ ಶಾಲು ಸರಬರಾಜನ್ನು (2ನೇ ಪುಟಕ್ಕೆ)


## ಬಿ.ಡಿ. ಪತ್ರಿಯವರು ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ ವಾಸಿಯಾದ

**ಬಿ.ಡಿ. ಪತ್ರಿ**

(70 ವರ್ಷ) ಇವರು ದಿನಾಂಕ : 09.02.2022ರ ಬುಧವಾರದಂದು ವಯೋಸಹಜವಾಗಿ ನಿಧನರಾಗಿರುತ್ತಾರೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ : 10.02.2022ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮ ನೆಗಳೂರು, ಗುತ್ತಲ ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ನೆರವೇರಿಸಲಾಗುವುದು.

ಅಂತಿಮ ದರ್ಶನ : ದಿನಾಂಕ : 10.02.2022ರ ಬೆಳಿಗ್ಗೆ 7.00 ರಿಂದ 10.00 ಗಂಟೆಯವರೆಗೆ. ಸ್ಥಳ : 7ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.

ಇಂತಿ ದುಃಖತಪ್ತ ಕುಟುಂಬ ವರ್ಗದವರು
ಫೋ. : 9972 801280


## ಮುಂದೆ ಕೆಂಪು ಕೋಟೆ ಮೇಲೂ ಕೇಸರಿ ಧ್ವಜ ಹಾರಬಹುದು

ಬೆಂಗಳೂರು, ಫೆ. 9 – ಮುಂದಾನೊಂದು ಕಾಲದಲ್ಲಿ ಕೆಂಪು ಕೋಟೆಯ ಮೇಲೆ ಕೇಸರಿ ಧ್ವಜ ಹಾರಬಹುದು ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.



ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಈ ಹಿಂದೆ ಭಾರತದಲ್ಲಿ ಕೇಸರಿ ಧ್ವಜ ಇತ್ತು. ಈಗ ತ್ರಿವರ್ಣ ಧ್ವಜ ರಾಷ್ಟ್ರ ಧ್ವಜ ವಾಗಿದೆ. ಮುಂದಿನ 100, 200 ಇಲ್ಲವೇ 500 ವರ್ಷಗಳ ನಂತರ ಮತ್ತೆ ಕೇಸರಿ ಧ್ವಜ ರಾಷ್ಟ್ರಧ್ವಜ ವಾಗಬಹುದು ಎಂದಿದ್ದಾರೆ. (2ನೇ ಪುಟಕ್ಕೆ)


## ಪುಣ್ಯಸ್ಮರಣೆ



ದಿ|| ಬುಳ್ಳಾಪುರದ ರೇವಣಸಿದ್ದಪ್ಪ
ಮರಣ : 20.09.2002
*ನೀವು ಇಲ್ಲದೇ ಜರುಗಿದ 20 ವರ್ಷ, ಬೇವು ತುಂಬಿ ಮರುಗಿದೆ ಮನೆಯ ಹರ್ಷ*




ದಿ|| ಬುಳ್ಳಾಪುರದ ಜಯಮಂಗಳಮ್ಮ
ಮರಣ : 10.02.2018
*ನೀವು ಇಲ್ಲದೇ ಜರುಗಿದ 4 ವರ್ಷ, ಬೇವು ತುಂಬಿ ಮರುಗಿದೆ ಮನೆಯ ಹರ್ಷ*

ನೀವು ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ
ನಿಮ್ಮ ಸ್ಮರಣೆಯಲ್ಲಿ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಶ್ರೀಮತಿ ಶ್ರೀ ಬುಳ್ಳಾಪುರದ ಸಿದ್ದೇಶ್ ಮತ್ತು ಸಹೋದರಿಯರು ಮತ್ತು ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು ಬುಳ್ಳಾಪುರದ ಬಂಧು-ಮಿತ್ರರು

## ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ: 25.04.1956

ನಿಧನ 22.02.2021

**ಶ್ರೀ ಮಿಠಾಯಿ ಡಿ.ಉಜ್ಜೇಶ್‌ರವರು**

( ಡಿ. ಸಿದ್ದಪ್ಪ ಅಂಡ್ ಸನ್ಸ್ ಕಿರಾಣಿ ಅಂಗಡಿ ಮತ್ತು ಶ್ರೀ ಸಿದ್ದೇಶ್ವರ ಪ್ಯಾಲೇಸ್ ಎ/ಸಿ ಕನ್ವೆಷನ್ ಹಾಲ್ ಮಾಲೀಕರು ಖ್ಯಾತ ಉದ್ದಿಮೆದಾರರು )

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ
ನಿಮ್ಮ ಸ್ಮರಣೆಯಲ್ಲಿ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಇಂತಿ ದುಃಖತಪ್ತರು

ಪತ್ನಿ : ಶ್ರೀಮತಿ ಇಂದಿರಮ್ಮ ಮಿಠಾಯಿ ಡಿ. ಉಜ್ಜೇಶ್ ✦ ಪುತ್ರ : ಡಿ.ಯು. ಅರುಣ್ ಕುಮಾರ್, ಶ್ರೀಮತಿ ದಿವ್ಯ
ಪುತ್ರಿ : ಶ್ರೀಮತಿ ಅಶ್ವಿನಿ, ಕೆ.ಜಿ. ಕೃಷ್ಣ, ನಗರಸಭೆ ಸದಸ್ಯರು, ಹರಿಹರ, ✦ ಪುತ್ರಿ: ಶ್ರೀಮತಿ ಆಶಾ, ಬಸವರಾಜ್ ಧಾರವಾಡ.
ಸಹೋದರರು : ✦ ಡಿ. ಹೇಮಂತರಾಜ್ ಮತ್ತು ಮಕ್ಕಳು, ✦ ದಿ|| ಡಿ.ನಾಗರಾಜ್ ಮತ್ತು ಮಕ್ಕಳು ✦ ದಿ|| ಡಿ. ಬಸವರಾಜ್ ಮತ್ತು ಮಕ್ಕಳು, ✦ ಡಿ. ಮಂಜುನಾಥ್ ಮತ್ತು ಮಕ್ಕಳು
ಸಹೋದರಿಯರು :✦ ಶ್ರೀಮತಿ ಸಿದ್ದಮ್ಮ ದಿ|| ಓಂಕಾರಪ್ಪ ಮತ್ತು ಮಕ್ಕಳು, ದೊಡ್ಡಬಾತಿ. ✦ ಶ್ರೀಮತಿ ರಿಂದಮ್ಮ, ಕರಿಬಸಪ್ಪ ಮತ್ತು ಮಕ್ಕಳು, ಕೊಮಾರನಹಳ್ಳಿ.
✦ ದಿ|| ಶ್ರೀಮತಿ ಸಾಕಮ್ಮ ದಿ|| ಕೆ.ಜಿ. ನಿಂಗಪ್ಪ ಹಲಸಬಾಳು ಮತ್ತು ಮಕ್ಕಳು ✦ ಶ್ರೀಮತಿ ಗೌರಮ್ಮ, ಶ್ರೀ ರೇವಣಸಿದ್ದಪ್ಪ ಕೋಡಿಹಳ್ಳಿ ಮತ್ತು ಮಕ್ಕಳು
✦ ಶ್ರೀಮತಿ ಗಂಗಮ್ಮ, ಎಬಿಸಿ ಬಸವರಾಜ್ ಅಮರಾವತಿ ಮತ್ತು ಮಕ್ಕಳು ✦ ಶ್ರೀಮತಿ ಮಹಾದೇವಮ್ಮ, ಶ್ರೀ ಕರಿಗೌಡ್ರು ಸಾಸ್ವಿಹಳ್ಳಿ ಮತ್ತು ಮಕ್ಕಳು
ದಿ|| ಮಿಠಾಯಿ ಡಿ. ಸಿದ್ದಪ್ಪನವರ ಸಹೋದರರಾದ : ✦ ಮಿಠಾಯಿ ಡಿ. ಸಂಗಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು
✦ ಮಿಠಾಯಿ ಡಿ. ಹನುಮಂತಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು. ✦ ಸ್ನೇಹಿತರು, ಬಂಧುಗಳು ಹಾಗೂ ಸಿಬ್ಬಂದಿ ವರ್ಗದವರು

## ಸ್ವಾತಂತ್ರ್ಯ ಇದೆ: ಪ್ರಿಯಾಂಕಾ

**(1ನೇ ಪುಟದಿಂದ)** ಯಾರಿಗೂ ಇಲ್ಲ ಎಂದು ಪ್ರಿಯಾಂಕ ಹೇಳಿದ್ದಾರೆ.

ಮತ್ತೊಂದು ಪ್ರಶ್ನೆ ಮಾಡಿದ ಪತ್ರಕರ್ತರೊಬ್ಬರು, ಶಾಲೆಯಲ್ಲಿ ಬಿಕನಿ ಧರಿಸುವ ಪ್ರಶ್ನೆ ಎಲ್ಲಿಂದ ಬಂತು? ಎಂದರು.

ವಿಷಯವನ್ನು ನೀವು ಯಾವ ರೀತಿ ಬೇಕಾದರೂ ತಿರುಚಬಹುದು. ಆದರೆ, ಮಹಿಳೆಗೆ ಏನು ಧರಿಸಬೇಕು ಎಂದು ಹೇಳುವ ಅಧಿಕಾರ ಯಾರಿಗೂ ಇಲ್ಲ ಎಂದ ಪ್ರಿಯಾಂಕ, ನಾನು ನಿಮಗೆ ಸ್ಕಾರ್ಫ್ ತೆಗೆ ಎಂದು ಹೇಳುತ್ತಿದ್ದೇನೆ ಎಂದರು.

ಇದಕ್ಕೆ ಉತ್ತರಿಸಿದ ಪತ್ರಕರ್ತ, ನಾನು ಪತ್ರಿಕಾಗೋಷ್ಠಿಯಲ್ಲಿದ್ದೇನೆ. ಶಾಲೆಯಲ್ಲಿ ಅಲ್ಲ ಎಂದು ಹೇಳಿದ. ಮುಂದುವರೆದು ಮಾತನಾಡಿದ ವಾದ್ರಾ, ಸ್ಕಾರ್ಫ್ ತೆಗೆ ಎಂದು ಹೇಳುವ ಅಧಿಕಾರ ನನಗಿಲ್ಲ. ಅದೇ ರೀತಿ, ಯಾರೊಬ್ಬರಿಗೂ ಮಹಿಳೆ ಏನು ಧರಿಸಬೇಕು ಎಂದು ಹೇಳುವ ಅಧಿಕಾರವಿಲ್ಲ ಎಂದರು. ನಂತರ ಅವರು ವಿಷಯಕ್ಕೆ ತೆರೆ ಎಳೆದು ಮುಂದಿನ ಪ್ರಶ್ನೆಗೆ ಹೋದರು.

## ಬಿಕಿನಿ ಕೀಳು ಮಟ್ಟದ ಶಬ್ದ

**(1ನೇ ಪುಟದಿಂದ)** ಮಾಡಿದ್ದಾರೆ.

ಕೇಂದ್ರ ಹಾಗು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿಲ್ಲದೆ, ಹತಾಶರಾಗಿ ಪ್ರಿಯಾಂಕ ಗಾಂಧಿ ಈ ಹೇಳಿಕೆ ನೀಡಿ, ಮುಗ್ಧ ಹೆಣ್ಣು ಮಕ್ಕಳನ್ನು ಪ್ರಚೋದಿಸುತ್ತಿದ್ದಾರೆ ಎಂದವರು ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲೂ ಸದ್ದು ಮಾಡಿದ ಹಿಜಾಬ್ ಯುವಕನಿಗೆ ತಿವಿತ : ಪಟ್ಟಣದಲ್ಲಿ ನಿಷೇಧಾಜ್ಞೆ ಜಾರಿ





ಮಲೇಬೆನ್ನೂರು, ಫೆ.9- ಹಿಜಾಬ್ ವಿವಾದ ಮಲೇಬೆನ್ನೂರು ಪಟ್ಟಣದಲ್ಲೂ ಸದ್ದು ಮಾಡಿದ್ದು, ಹಿಜಾಬ್ ಕುರಿತು ಜಾಲತಾಣದಲ್ಲಿ ಪ್ರಚೋದನಕಾರಿ ಚಿತ್ರ ಹಾಕಿದ ಯುವಕನಿಗೆ ಇನ್ನೊಂದು ಗುಂಪಿನ ಯುವಕರು ಸ್ಕ್ರೂ ಡ್ರೈವರ್‌ನಿಂದ ಹೊಟ್ಟೆಗೆ ತಿವಿದ ಘಟನೆ ಬುಧವಾರ ಮಧ್ಯಾಹ್ನ ಜಿಗಳಿ ಸರ್ಕಲ್‌ನಲ್ಲಿ ನಡೆದಿದೆ.

ಈ ಘಟನೆಯಿಂದಾಗಿ ಪಟ್ಟಣದಲ್ಲಿ ಅಘೋಷಿತ ಬಂದ್ ವಾತಾವರಣ ನಿರ್ಮಾಣವಾಗಿದ್ದು, ಎಲ್ಲೆಡೆ ಮುಂಜಾಗ್ರತೆ ಕ್ರಮವಾಗಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ. ಅಲ್ಲದೆ ಪಟ್ಟಣದಲ್ಲಿ ನಾಳೆ ದಿನಾಂಕ 11 ರ ತಡರಾತ್ರಿವರೆಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಸ್ಕ್ರೂ ಡ್ರೈವರ್ ತಿವಿತದಿಂದಾಗಿ ಯುವಕನ ಪಕ್ಕೆ ಭಾಗದಲ್ಲಿ ಗಾಯವಾಗಿ ತೀವ್ರ ರಕ್ತ ಬಂದಿದ್ದು, ತಕ್ಷಣ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆ ಸಿ.ಜಿ. ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಗಾಯಗೊಂಡಿದ್ದ ಯುವಕ ಚಿಕಿತ್ಸೆ ನಂತರ ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎನ್ನಲಾಗಿದೆ. ಘಟನೆ ಸಂಬಂಧ ನಾಲ್ವರು ಯುವಕರನ್ನು ಬಂಧಿಸಲಾಗಿದೆ ಎಂದು ಹೇಳಲಾಗಿದೆ.

ಘಟನೆ ನಡೆದ ಜಿಗಳಿ ಸರ್ಕಲ್‌ನಲ್ಲಿ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಲಾಗಿದೆ. ಉಳಿದ ಭಾಗಗಳಲ್ಲಿ ವಿಷಯ ತಿಳಿಯುತ್ತಿದ್ದಂತೆಯೇ ಕೆಲವರು ಭಯದಿಂದ ಅಂಗಡಿಗಳನ್ನು ಬಂದ್ ಮಾಡಿದರು.

ಗಾಯಗೊಂಡಿದ್ದ ಯುವಕನನ್ನು ಆರೋಗ್ಯ ಕೇಂದ್ರಕ್ಕೆ ಕರೆ ತಂದಾಗ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದ ಜನರನ್ನು ಸಿಪಿಐ ಸತೀಶ್‌ಕುಮಾರ್, ಪಿಎಸ್‌ಐಗಳಾದ ರವಿಕುಮಾರ್, ವೀರಬಸಪ್ಪ ಕುಸಲಾಪುರ ಅವರ ನೇತೃತ್ವದಲ್ಲಿ ಪೊಲೀಸರು ತೆರವುಗೊಳಿಸಿ ವಾತಾವರಣವನ್ನು ತಿಳಿಗೊಳಿಸಿದರು. ವಿಷಯ ತಿಳಿದ ತಕ್ಷಣ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಗುರುವಾರ ಪಟ್ಟಣದಲ್ಲಿ ನಡೆಯಬೇಕಾಗಿದ್ದ ವಾರದ ಸಂತೆಯನ್ನು ರದ್ದು ಮಾಡುವಂತೆ ಪುರಸಭೆ ಮುಖ್ಯಾಧಿಕಾರಿ ರುಕ್ಮಿಣಿ ಅವರಿಗೆ ತಹಶೀಲ್ದಾರ್ ಅವರು ಸೂಚಿಸಿದ ನಂತರ ಧ್ವನಿವರ್ಧಕದ ಮೂಲಕ ಸಂತೆ ರದ್ದು ಮಾಡಿರುವ ಬಗ್ಗೆ ಪ್ರಚಾರ ಮಾಡಲಾಯಿತು.

ಉಪತಹಶೀಲ್ದಾರ್ ಆರ್. ರವಿ, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ಈ ವೇಳೆ ಹಾಜರಿದ್ದರು.

ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪಟ್ಟಣದಲ್ಲಿ ಇಬ್ಬರು ಸಿಪಿಐ, ನಾಲ್ವರು ಪಿಎಸ್‌ಐಗಳು ಮತ್ತು ಕೆಎಸ್‌ಆರ್‌ಪಿ ಹಾಗೂ ತುಕಡಿಗಳನ್ನು ನಿಯೋಜಿಸಲಾಗಿದೆ ಎಂದು ಪಿಎಸ್‌ಐ ರವಿಕುಮಾರ್ ತಿಳಿಸಿದ್ದಾರೆ.

**ಎಚ್ಚರಿಕೆ :** ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ಸಂದೇಶಗಳು ಹಾಗೂ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದಾಗಿ ಪಿಎಸ್‌ಐ ರವಿಕುಮಾರ್ ಎಚ್ಚರಿಕೆ ನೀಡಿದ್ದಾರೆ.

## ಜಲಜೀವನ್ ಯೋಜನೆಗೆ ಅಸ್ತು

**(1ನೇ ಪುಟದಿಂದ)** ಲಭ್ಯವಾಗುತ್ತದೆಯೋ ಅಂಥ ಗ್ರಾಮೀಣ ವಸತಿಗಳಿಗೆ ಮೊದಲ ಆದ್ಯತೆ ಮೇಲೆ ನೀರು ಸಂಪರ್ಕ ಕಲ್ಪಿಸಲಾಗುವುದು. ಈಗಾಗಲೇ ಕೆಲವೆಡೆ ಯೋಜನೆಗಳು ಪ್ರಾರಂಭಗೊಂಡಿವೆ. ಇಂದು ಈ ದೊಡ್ಡ ಪ್ರಮಾಣದ ಯೋಜನೆಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

2011 ರ ಕೆಪಿಎಸ್‌ಸಿ 362 ಹುದ್ದೆಗಳ ನೇಮಕಾತಿಗೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಮಾಧುಸ್ವಾಮಿ ಇದೇ ಸಂದರ್ಭದಲ್ಲಿ ತಿಳಿಸಿದರು.

ಗೆಜೆಟೆಡ್ ಪ್ರೊಬೇಷನರಿ ಆಯ್ಕೆ ಪ್ರಕ್ರಿಯೆಯನ್ನು ಕೆಪಿಎಸ್‌ಸಿ ಅಂತಿಮಗೊಳಿಸಿ ಅಧಿಸೂಚನೆ ಹೊರಡಿಸಿರುವ ನೇಮಕಾತಿಗೆ ಆದೇಶದ ಅನುಮೋದನೆ ನೀಡಲು ಮುಂದಿನ ಜಂಟಿ ಅಧಿವೇಶನದಲ್ಲಿ ಮಸೂದೆ ಜಾರಿಗೊಳಿಸಲು ಸಭೆ ತೀರ್ಮಾನಿಸಿದೆ ಎಂದರು.

ಮಸೂದೆ ಅಂಗೀಕಾರವಾದ ನಂತರ ಹಿರಿತನದ ಆಧಾರದ ಮೇಲೆ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಹುದ್ದೆಗಳನ್ನು ತೋರಿಸಲಾಗುವುದು.

ನೇಮಕಾತಿ ಪ್ರಕ್ರಿಯೆಯಲ್ಲಿ ಸಾಕಷ್ಟು ಅಕ್ರಮ ನಡೆದಿದೆ ಎಂದು ಕೆಲವರು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರು. ಅಂದಿನ ಸರ್ಕಾರ ಮಧ್ಯಂತರ ವರದಿ ಆಧಾರವಾಗಿಟ್ಟುಕೊಂಡು ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸಿತು. ಈಗ ರಾಜ್ಯ ಸರ್ಕಾರ 2011 ರಲ್ಲಿ ಯಾರೆಲ್ಲ ನೇಮಕಗೊಂಡಿದ್ದರೋ ಅವರಿಗೆ ನೇಮಕಾತಿ ಆದೇಶ ನೀಡಲಿದೆ.

ಸೇವಾ ಹಿರಿತನ ಮತ್ತು ಸೇವಾ ಮುಂಬಡ್ತಿ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಮಾಡಲಾಗುವುದು. ಕಾನೂನು ಆಯೋಗದೊಂದಿಗೆ ಚರ್ಚಿಸಿ, ಸರ್ಕಾರ ತೀರ್ಮಾನ ಕೈಗೊಂಡಿದೆ ಎಂದರು.

ಮಾಲೂರು ಗ್ರಾಮದಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ವಸತಿ ಶಾಲೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ 17 ಕೋಟಿ ರೂ. ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿಪಡಿಸುತ್ತಿರುವ 28.63 ಕೋಟಿ ಮೊತ್ತದ 6 ರಸ್ತೆ ಕಾಮಗಾರಿಗಳ ಸ್ಥಳಗಳನ್ನು ಬದಲಾವಣೆ ಮಾಡಲು ಅನುಮೋದನೆ ನೀಡಲಾಗಿದೆ.

ವಿಜಯಪುರ ಮಹಾನಗರ ಪಾಲಿಕೆಯಲ್ಲಿ ದೀರ್ಘಾವಧಿ ಗುತ್ತಿಗೆ ನೀಡಿರುವ ಆಸ್ತಿಗಳ ಪೈಕಿ ಉಳಿಕೆಯ 366 ಲೀಸ್ ಆಸ್ತಿಗಳನ್ನು ಮಾರುಕಟ್ಟೆಯ ದರದಲ್ಲಿ ಲೀಸ್‌ದಾರರಿಗೆ ಮಾರಾಟ ಮಾಡಲು ಸಭೆ ಅನುಮತಿ ನೀಡಿದೆ ಎಂದರು.

ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ನಿರ್ಮಿಸಲಾಗುವ ನೂತನ ಅನುಭವ ಮಂಟಪ ನಿರ್ಮಾಣ ಕಾಮಗಾರಿಯ ಅಂದಾಜು 560 ಕೋಟಿ ರೂ.ಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು.

# ಮೀಸಲಾತಿ : ಸತ್ಯಾಗ್ರಹಕ್ಕೆ ಶ್ರೀಗಳ ನಿರ್ಧಾರ



**(1ನೇ ಪುಟದಿಂದ)** ಸ್ವಾಮೀಜಿಯವರ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ನಡೆದ ರಾಜ್ಯಮಟ್ಟದ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ, ಮಾತನಾಡಿದರು.

ಗುರುವಾರ ಬೆಳಿಗ್ಗೆ 10 ಗಂಟೆಗೆ ವಾಲ್ಮೀಕಿ ಪುತ್ಥಳಿ ಮತ್ತು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಫ್ರೀಡಂ ಪಾರ್ಕ್‌ನಲ್ಲಿ ಏಕಾಂಗಿಯಾಗಿ ಧರಣಿ ಸತ್ಯಾಗ್ರಹ ಪ್ರಾರಂಭಿಸುತ್ತೇನೆ ಎಂದರು.

ಕೋವಿಡ್ ಹಿನ್ನೆಲೆಯಲ್ಲಿ ಭಕ್ತರು ಅಲ್ಲಿಗೆ ಬರುವುದು ಬೇಡ. ಸರ್ಕಾರದ ಮಾರ್ಗ ಸೂಚಿಗಳನ್ನು ಪಾಲಿಸಬೇಕೆಂದಾಗ ಸಭೆಯಲ್ಲಿದ್ದ ಭಕ್ತರು ನಾವು ನಿಮ್ಮ ಜೊತೆ ಧರಣಿ ಕುಳಿತುಕೊಳ್ಳುವುದಾಗಿ ವೇದಿಕೆ ಬಳಿ ಜಮಾಯಿಸಿ ಘೋಷಣೆ ಕೂಗಿದರು. ಆಗ ಭಾವುಕರಾದ ಶ್ರೀಗಳು, ನಿಮ್ಮ ಅಭಿಮಾನ ನಮಗೆ ಅರ್ಥವಾಗುತ್ತದೆ. ನಮಗೆ ಭಕ್ತರ ಆರೋಗ್ಯ ಮುಖ್ಯವಾಗಿರುವುದರಿಂದ ಹೆಚ್ಚು ಜನ ಅಲ್ಲಿ ಸೇರುವುದು ಸೂಕ್ತವಲ್ಲ ಎಂದು ಮನವರಿಕೆ ಮಾಡಿಕೊಟ್ಟರು.

ಮೀಸಲಾತಿ ಹೆಚ್ಚಳದ ಜೊತೆಗೆ ನಕಲಿ ಜಾತಿ ಪ್ರಮಾಣ ಪತ್ರ ತಡೆಗೆ ಕಾನೂನು ಕ್ರಮ ಕೈಗೊಳ್ಳಬೇಕು. ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕೂಡಲೇ ಗಮನ ಹರಿಸಬೇಕು. ಎಸ್ಸಿ, ಎಸ್ಟಿ ನೌಕರರಿಗೆ ಜೇಷ್ಠತೆ ಆಧಾರಿತ ಹುದ್ದೆ ನೀಡಬೇಕು. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಜೊತೆಗೆ ವಾಲ್ಮೀಕಿ ಮಂದಿರವನ್ನು ನಿರ್ಮಿಸಬೇಕು.

ರಾಜ್ಯದಲ್ಲಿ ವಾಲ್ಮೀಕಿ ಅಧ್ಯಯನ ಪೀಠಗಳಿಗೆ ಮೂಲಭೂತ ಸೌಕರ್ಯ ನೀಡಬೇಕು. ಎಸ್ಟಿ ಸಚಿವಾಲಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಚೇರಿಗಳನ್ನು ತೆರೆಯಬೇಕು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಅಮಿತ್ ಷಾ ಅವರು ಕೊಟ್ಟ ಮಾತಿನಂತೆ ಚಿತ್ರದುರ್ಗದಲ್ಲಿ ಮದಕರಿ ನಾಯಕರ ಥೀಮ್ ಪಾರ್ಕ್ ನಿರ್ಮಿಸಬೇಕು. ಬೆಂಗಳೂರಿನಲ್ಲಿ ಮೆಟ್ರೋ ರೈಲು ನಿಲ್ದಾಣಕ್ಕೆ ವಾಲ್ಮೀಕಿ ಅವರ ಹೆಸರನ್ನು ನಾಮಕರಣ ಮಾಡಬೇಕೆಂಬ ಬೇಡಿಕೆಗಳನ್ನು ಸರ್ಕಾರ ಪರಿಗಣಿಸಬೇಕೆಂದು ಸ್ವಾಮೀಜಿ ಆಗ್ರಹಿಸಿದರು.

**ಶ್ರೀಗಳ ಮನವಿ :** ವಾಲ್ಮೀಕಿ ಜಾತ್ರೆ ಸಮಾಜದಲ್ಲಿ ಜಾಗೃತಿ ಮೂಡಿಸಲು ಸಹಕಾರಿಯಾಗಿದ್ದು, 3 ಜಾತ್ರೆಗಳಿಗೆ ಭಕ್ತರು ಹಾಗೂ ಸರ್ಕಾರ ಮಾಡಿದ ನೆರವಿನಲ್ಲಿ ಖರ್ಚಾಗಿ ಉಳಿದ 4.16 ಕೋಟಿ ರೂ.ಗಳನ್ನು ಬ್ಯಾಂಕಿನಲ್ಲಿ ಠೇವಣಿ ಮಾಡಿದ್ದೇವೆ. ಮಠ ಹಾಗೂ ನಮ್ಮ ಬಗ್ಗೆ ಯಾರೂ ಬಹಿರಂಗ ಚರ್ಚೆ ಮಾಡಬೇಡಿ. ಏನೇ ಸಂದೇಹಗಳಿದ್ದರೂ ನಮ್ಮನ್ನು ಕೇಳಿ ಬಗೆಹರಿಸಿಕೊಳ್ಳಿ ಎಂದು ಶ್ರೀಗಳು ಮನವಿ ಮಾಡಿದರು.

4 ನೇ ವರ್ಷದ ವಾಲ್ಮೀಕಿ ಜಾತ್ರಾ ಸಮಿತಿಯ ಅಧ್ಯಕ್ಷರೂ ಆದ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಮಾತನಾಡಿ, ಕೋವಿಡ್ ಕಾರಣದಿಂದಾಗಿ ಮುಂದೂಡಿರುವ 4 ನೇ ವರ್ಷದ ವಾಲ್ಮೀಕಿ ಜಾತ್ರೆಯನ್ನು ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿ ಲಿಂಗೈಕ್ಯರಾದ ಏಪ್ರಿಲ್ 3 ರಂದೇ ಆಚರಿಸಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಮೀಸಲಾತಿ ಹೆಸರಿನಲ್ಲಿ ಮೂರು ಬಾರಿ ಶಾಸಕನಾಗಿದ್ದೇನೆ. ಮೀಸಲಾತಿ ವಿಚಾರ ಬಂದಾಗ ಎಲ್ಲಾ ತ್ಯಾಗ ಸಿದ್ದನಿದ್ದೇನೆ ಎಂದರು.

ರಾಯಚೂರು ಗ್ರಾಮೀಣ ಶಾಸಕ ಬಸವನಗೌಡ ದದ್ದಲ್, ಕೆಪಿಎಸ್‌ಸಿ ನಿವೃತ್ತ ಸದಸ್ಯ ಜಿ.ಟಿ. ಚಂದ್ರಶೇಖರಪ್ಪ, ಮಠದ ಧರ್ಮದರ್ಶಿ ಶ್ರೀಮತಿ ಶಾಂತಲಾ ರಾಜಣ್ಣ ಮಾತನಾಡಿದರು.

ಹೊದಿಗೆರೆ ರಮೇಶ್ ಮಾತನಾಡಿ, ಸಚಿವ ಶ್ರೀರಾಮುಲು ಅವರು ಮೀಸಲಾತಿ ಹೆಚ್ಚಳ ಮಾಡದ ಆ ಸರ್ಕಾರದಲ್ಲಿ ಮುಂದುವರೆಯಬಾರದು. ರಾಜೀನಾಮೆ ಕೊಟ್ಟು ಶ್ರೀಗಳ ಜೊತೆ ಬನ್ನಿ, ಸಮಾಜ ನಿಮಗೆ ಸೂಕ್ತ ಸ್ಥಾನಮಾನ ನೀಡುತ್ತದೆ ಎಂದರು.

ಹೋರಾಟಗಾರರಾದ ಸಿರಿಗೆರೆ ತಿಪ್ಪೇಶ್, ಬಸವರಾಜ ನಾಯಕ, ಹರ್ತಿಕೋಟೆ ವೀರೇಂದ್ರಸಿಂಹ, ಟಿ. ಈಶ್ವರ್, ಚಾಮರಾಜನಗರ ಜಿಲ್ಲೆಯ ಶ್ರೀನಿವಾಸ ನಾಯಕ, ಅಣಜಿ ಅಂಜಿನಪ್ಪ, ವೈ. ಹನುಮಂತನಾಯಕ, ಶ್ರೀಮತಿ ವಿಜಯಶ್ರೀ, ಮಹೇಂದ್ರ ಕುಸಗಲ್, ಎಲ್. ಮುನಿಸ್ವಾಮಿ, ಕೋಲಾರದ ವೆಂಕಟರಮಣ, ತುಳಸಿರಾಮ್, ಹಾವೇರಿಯ ಚಂದ್ರು ಮಾತನಾಡಿದರು.

ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಧರ್ಮದರ್ಶಿಗಳಾದ ಬಿ. ವೀರಣ್ಣ, ಕೆ.ಬಿ. ಮಂಜುನಾಥ, ಹೊಸಪೇಟೆಯ ಜಂಬಣ್ಣ ನಾಯಕ, ಶಿವಮೊಗ್ಗದ ಬಸವರಾಜಪ್ಪ, ಹಾಸನದ ಮಹೇಶ್, ಕೊಪ್ಪಳದ ರತ್ನಾಕರ, ಧಾರವಾಡದ ಭರತ್, ಜಿಗಳಿ ಆನಂದಪ್ಪ, ಹರಿಹರದ ಪಾರ್ವತಿ, ಹರಪನಹಳ್ಳಿಯ ಉಚ್ಚೆಂಗಪ್ಪ, ಫಣಿಯಾಪುರದ ಲಿಂಗರಾಜ್, ಪತ್ರಕರ್ತ ಜಿಗಳಿ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಹರಿಹರದಲ್ಲಿ ಗಲಾಟೆ: 6 ಪ್ರಕರಣ ದಾಖಲು



**(1ನೇ ಪುಟದಿಂದ)** ನೀಡಿದ ನಂತರ ಮಾತನಾಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ನಿನ್ನೆ ನಡೆದ ಘರ್ಷಣೆ ವಿಚಾರಕ್ಕೆ ಈಗಾಗಲೇ 6 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ನಾನು ಮನೆಗೆ ನಡೆದುಕೊಂಡು ಹೋಗುವಾಗ ನನ್ನ ಮೇಲೆ ಹಲ್ಲೆ ನಡೆದಿದೆ ಎಂದು ಓರ್ವ ಯುವಕ ಪ್ರತ್ಯಕ್ಷವಾಗಿ ದೂರನ್ನು ನೀಡಿದ್ದಾರೆ ಎಂದವರು ತಿಳಿಸಿದ್ದಾರೆ.

ನಾವು ಇದುವರೆಗೂ ಯಾರನ್ನೂ ಬಂಧಿಸಿಲ್ಲ. ಸರಿಯಾದ ರೀತಿಯಲ್ಲಿ ಪರಿಶೀಲನೆ ನಡೆಸಿ ಬಂಧನದ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ನಗರದಾದ್ಯಂತ 144 ನೇ ಸೆಕ್ಷನ್ ಜಾರಿಯಲ್ಲಿ ಇರುವುದರಿಂದ, ಯಾವುದೇ ರೀತಿಯ ಪ್ರತಿಭಟನೆ ಮಾಡುವುದಾಗಲೀ ಜೊತೆಗೆ ಇತರೆ ಚಟುವಟಿಕೆಗಳನ್ನು ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

ಸಾರ್ವಜನಿಕರಿಗೆ ಏನಾದರೂ ಸಮಸ್ಯೆಗಳು ಇದ್ದರೆ, ಅವರು ಸ್ವಯಂ ಪ್ರೇರಿತರಾಗಿ ನನಗೆ ದೂರವಾಣಿ ಕರೆ ಮಾಡಬಹುದು. ನಂತರದಲ್ಲಿ ನಿರಪರಾಧಿಗಳಿಗೆ ತೊಂದರೆ ಆಗದಂತೆ ವಿಚಾರಣೆ ನಡೆಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದವರು ಹೇಳಿದ್ದಾರೆ.

ಈ ಘಟನೆ ಪೂರ್ವ ನಿಯೋಜಿತ ಕಾರ್ಯ ಎಂದು ಈಗ ಸದ್ಯದ ಪರಿಸ್ಥಿತಿಯಲ್ಲಿ ಏನು ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಹೊರಗಡೆಯಿಂದ ಬಂದ ಕೆಲವು ಯುವಕರು ದಾಂಧಲೆಗೆ ಮುಂದಾಗಿ ಅತಿರೇಕದ ವರ್ತನೆ ಮಾಡಿದ್ದರಿಂದ ಅದನ್ನು ಹತೋಟಿಗೆ ತರಲು ಲಾಠಿ ಪ್ರಹಾರ, ಅಶ್ರುವಾಯು ಸಿಡಿಸಿಲಾಯಿತು ಎಂದವರು ಸ್ಪಷ್ಟಪಡಿಸಿದ್ದಾರೆ.

ನಿನ್ನೆಯ ಘಟನೆಯನ್ನು ಯಾರೂ ಮುಂದುವರೆಸಲು ಹೋಗಬಾರದು. ಒಂದು ವೇಳೆ ಮುಂದುವರೆಸಿದರೆ ಅವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದವರು ಎಚ್ಚರಿಸಿದ್ದಾರೆ.

ಪೊಲೀಸ್ ಸಿಬ್ಬಂದಿಗಳ ಮೇಲೆ ಕಲ್ಲು ತೂರಾಟ ಮಾಡಿ, ಹಲ್ಲೆ ನಡೆಸಿದವರ ಮೇಲೆ ಮೂರು ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಇನ್ನೂ ಸ್ವಲ್ಪ ಮಟ್ಟಿಗೆ ಸುಧಾರಣೆ ಬಂದ ನಂತರದಲ್ಲಿ ಎರಡೂ ಕೋಮಿನ ಮುಖಂಡರ ಸಮ್ಮುಖದಲ್ಲಿ ಶಾಂತಿ ಸಭೆ ಏರ್ಪಡಿಸಲಾಗುತ್ತದೆ ಎಂದು ಹೇಳಿದರು.

ಶಾಸಕ ಎಸ್ ರಾಮಪ್ಪ ಮಾತನಾಡಿ, ನಿನ್ನೆ ಹಿಜಾಬ್ ಧರಿಸುವ ವಿಚಾರಕ್ಕೆ ನಡೆದ ಘರ್ಷಣೆ 100 ಕ್ಕೆ100 ರಷ್ಟು ಪೂರ್ವ ನಿಯೋಜಿತವಾಗಿದೆ. ಈ ಕೃತ್ಯ ನಡೆದಿರೋದು ರಾಜಕೀಯ ಉದ್ದೇಶಕ್ಕಾಗಿ ಮಾಡಿರುವುದು ನಿಜ ಸಂಗತಿ ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಸಿಪಿಐ ಸತೀಶ್ ಕುಮಾರ್, ಹನುಮಂತಪ್ಪ ಶಿರಹಳ್ಳಿ, ಪಿಸಿಐ ಸುನಿಲ್ ಬಸವರಾಜ್ ತೆಲಿ, ಪೊಲೀಸ್ ಸಿಬ್ಬಂದಿಗಳಾದ ನಿಂಗರಾಜ್, ಸತೀಶ್, ಮಂಜುನಾಥ್, ಕಾಲೇಜು ಉಪನ್ಯಾಸಕರು, ನಗರಸಭೆ ಸದಸ್ಯರು, ಮುಸ್ಲಿಂ ಸಮುದಾಯದ ಮುಖಂಡರು ಮತ್ತಿತರರು ಉಪಸ್ಥಿತರಿದ್ದರು.

### ಮುಸ್ಲಿಂ ಯುವಕರು ಪಾಕ್ ಪರ ಘೋಷಣೆ ಕೂಗಿಲ್ಲ

ಹರಿಹರ, ಫೆ. 9 - ಮುಸ್ಲಿಂ ಸಮುದಾಯದ ಯುವಕರು ಪೊಲೀಸ್ ಠಾಣೆಯ ಮುಂಭಾಗದಲ್ಲಿ ಪಾಕಿಸ್ತಾನ ಪರವಾಗಿ ಘೋಷಣೆ ಹಾಕಿದ್ದಾರೆ ಮತ್ತು ಪೊಲೀಸ್ ವಾಹನಗಳ ಗಾಜು ಒಡೆದಿದ್ದಾರೆ ಎಂಬ ಆರೋಪವನ್ನು ಸಮುದಾಯದ ಮುಖಂಡರು ತಳ್ಳಿ ಹಾಕಿದ್ದಾರೆ.

ಡಿ.ಆರ್.ಎಂ. ಸರ್ಕಾರಿ ಕಾಲೇಜಿನಲ್ಲಿ ನಡೆದ ಘರ್ಷಣೆಗೆ ಕಾರಣವಾದ ಯಾವುದೇ ವ್ಯಕ್ತಿಗಳಾದರೂ ಕಠಿಣ ಕಾನೂನು ಕ್ರಮಗಳನ್ನು ಜರುಗಿಸುವುದಕ್ಕೆ ನಮ್ಮ ಕಡೆಯಿಂದ ಸಹಕಾರ ಇರುತ್ತದೆ ಎಂದು ನಗರಸಭೆ ಮಾಜಿ ಸದಸ್ಯ ಮೊಹಮ್ಮದ್ ಸಿಗ್ಬತ್ ವುಲ್ಲಾ ಹೇಳಿದ್ದಾರೆ.

## ಹಿಜಾಬ್ ಸಂಘರ್ಷಕ್ಕೆ ಸರ್ಕಾರದ ಪ್ರಚೋದನೆ

**(1ನೇ ಪುಟದಿಂದ)** ಓರ್ವ ಸಚಿವರ ಪುತ್ರ ಮಾಡಿದ್ದಾನೆ ಎಂದು ಗಂಭೀರ ಆರೋಪ ಮಾಡಿದರು.

ಈತ ಸೂರತ್‌ನಿಂದ ಪೇಟಾ ಹಾಗೂ ಶಾಲುಗಳನ್ನು ತಂದು ಮಕ್ಕಳಿಗೆ ಹಂಚಿ ಗಲಭೆ ನಡೆಸಲು ಪ್ರಚೋದನೆ ಮಾಡಿದ್ದಾನೆ. ಅಷ್ಟೇ ಅಲ್ಲ, ಶಾಲಾ ಆವರಣದಲ್ಲಿ ರಾಷ್ಟ್ರಧ್ವಜ ಹಾರಿಸುವ ಬದಲು ಕೇಸರಿ ಧ್ವಜ ಹಾರಿಸಲು ಈತನ ಕುಮ್ಮಕ್ಕಿದೆ ಎಂದು ದೂರಿದರು.

ರಾಷ್ಟ್ರಧ್ವಜಕ್ಕೆ ಅದರದೇ ಆದ ಕಾಯಿದೆಯಿದೆ. ಧ್ವಜ ಕಂಬದ ಮೇಲೆ ಎಲ್ಲ ಧ್ವಜಗಳನ್ನು ಹಾರಿಸಲು ಸಾಧ್ಯವಿಲ್ಲ. ಅದು ಸರ್ಕಾರದ ಆಸ್ತಿ. ಸರ್ಕಾರದ ಆಸ್ತಿಯಲ್ಲಿ ಈ ರೀತಿ ಬೇರೆ ಧ್ವಜ ಹಾರಿಸಿರುವುದನ್ನು ನೋಡಿಕೊಂಡು ನಾವು ಸುಮ್ಮನೇ ಇರಲು ಸಾಧ್ಯವಿಲ್ಲ ಎಂದೂ ಅವರು ಹೇಳಿದ್ದಾರೆ.

ನಿಮ್ಮ ರಾಜಕೀಯ ಲಾಭಕ್ಕಾಗಿ ಮಕ್ಕಳನ್ನು ಏಕೆ ಹಾಳು ಮಾಡುತ್ತಿದ್ದೀರಿ? ಎಂದು ಪ್ರಶ್ನಿಸಿರುವ ಶಿವಕುಮಾರ್, ಚುನಾವಣಾ ಸಮಯ ಬಂದಾಗ ರಾಜಕಾರಣ ಮಾಡೋಣ. ಆದರೆ ಅನಗತ್ಯವಾಗಿ ಸಮಸ್ಯೆ ಸೃಷ್ಟಿಸುತ್ತಿರುವುದೇಕೆ? ಎಂದವರು ಪ್ರಶ್ನಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಿ, ವಿದ್ಯಾವಂತರನ್ನಾಗಿ ತಯಾರು ಮಾಡಬೇಕೇ ಹೊರತು, ಅವರಲ್ಲಿ ಧರ್ಮದ ನಡುವಣ ದ್ವೇಷದ ವಿಷಬೀಜ ಬಿತ್ತುವುದಲ್ಲ. ಈ ವಿಚಾರದ ಬಗ್ಗೆ ವಿದ್ಯಾರ್ಥಿಗಳ ಪೋಷಕರು ಮುಂದೆ ಮಾನಸಿಕವಾಗಿ ಬಹಳ ನೊಂದುಕೊಳ್ಳುತ್ತಾರೆ ಎಂದರು.

ಈ ವಿವಾದದ ಹಿಂದೆ ಕಾಂಗ್ರೆಸ್ ಪಿತೂರಿಯಿದೆ ಎಂದ ಗೃಹ ಸಚಿವ ಅರಗ ಜ್ಞಾನೇಂದ್ರ ಅವರ ಹೇಳಿಕೆಯನ್ನು ಅಲ್ಲಗಳೆದ ಅವರು ಸರ್ಕಾರ ಮಾಡುತ್ತಿರುವ ತಪ್ಪನ್ನು ನಮ್ಮ ಮೇಲೆ ಗೂಬೆ ಕೂರಿಸುವ ಪ್ರಯತ್ನ ನಡೆಯುತ್ತಿದೆ ಎಂದು ದೂರಿದರು.

## ನಗರದಲ್ಲಿ ಇಂದಿನಿಂದ ಭೂ ಮಾಪಕರ ಹುದ್ದೆಯ ಪರೀಕ್ಷಾರ್ಥಿಗಳಿಗೆ ತರಬೇತಿ

ದಾವಣಗೆರೆ, ಫೆ.9- ಭೂ ಮಾಪಕರ ಹುದ್ದೆಯ ಪರೀಕ್ಷಾರ್ಥಿಗಳಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಸಭಾಂಗಣದಲ್ಲಿ ನಾಳೆ ದಿನಾಂಕ 10 ರ ಗುರುವಾರದಿಂದ ಉಚಿತ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿವರಕ್ಕೆ ಡಾ. ಎಸ್. ರಂಗನಾಥ್, ರಾಜ್ಯ ಪರಿಷತ್ ಸದಸ್ಯರು, ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ದಾವಣಗೆರೆ. (99865-26812) ಇವರನ್ನು ಸಂಪರ್ಕಿಸಬಹುದು. ಅರ್ಜಿ ನಮೂನೆಗಾಗಿ ವೆಂಕಟೇಶನಾಯ್ಕ (99645-50628), ವೇಣು ನಾಯ್ಕ (8861720799) ಇವರನ್ನು ಸಂಪರ್ಕಿಸಿ.

ಸಂಘದ ಕಾರ್ಯದರ್ಶಿ ಸಿ. ಗುರುಮೂರ್ತಿ, ಡಾ. ಎಸ್. ರಂಗನಾಥ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಎಷ್ಟು ಬೇಕಾದರೂ ಕೇಸರಿ ಶಾಲು ಹಂಚುತ್ತೇನೆ : ಈಶ್ವರಪ್ಪ


ಬೆಂಗಳೂರು, ಫೆ. 9 – ಸ್ವತಂತ್ರ ಭಾರತದಲ್ಲಿದ್ದೇನೆ. ಎಷ್ಟು ಬೇಕಾದರೂ ಕೇಸರಿ ಶಾಲು ಹಂಚುತ್ತೇನೆ. ಕೇಸರಿ ಶಾಲು ಹಂಚಿದರೆ ತಪ್ಪೇನಿದೆ? ಎಂದು ಸಚಿವ ಕೆ.ಎಸ್. ಈಶ್ವರಪ್ಪ ಪ್ರಶ್ನಿಸಿದ್ದಾರೆ. ಶಿವಮೊಗ್ಗದ ಸಚಿವರೊಬ್ಬರ ಪುತ್ರ ಲೋಡ್‌ಗಟ್ಟಲೆ ಕೇಸರಿ ಶಾಲು ಹಂಚಿದ್ದಾನೆ ಎಂದು ಕಾಂಗ್ರೆಸ್ ಅಧ್ಯಕ್ಷ ಡಿಕೆಶಿ ನೀಡಿರುವ ಹೇಳಿಕೆಗೆ ಈಶ್ವರಪ್ಪ ತಿರುಗೇಟು ನೀಡಿದ್ದಾರೆ. ಕೇಸರಿ ಪೇಟ ಎಂದರೆ ಸಿದ್ದರಾಮಯ್ಯ, ಡಿಕೆಶಿ ಅವರಿಗೆ ಏನೋ ಹೊಟ್ಟೆಯಲ್ಲಿ ತಳಮಳ. ಸಿದ್ದರಾಮಯ್ಯಗೆ ಕೇಸರಿ ಪೇಟ ಹಾಕಲು ಹೋದಾಗ ಕಿತ್ತು ಹಾಕಿದ್ದಾರೆ. ಅವರಿಗೆ ಟಿಪ್ಪು ಸುಲ್ತಾನ್ ಟೋಪಿನೇ ಬೇಕು ಎಂದವರು ಲೇವಡಿ ಮಾಡಿದ್ದಾರೆ.

## ಹರಿಹರ : ಕವನ ಸಂಕಲನ ಆಹ್ವಾನ

ಹರಿಹರ, ಫೆ. 9- ಹರಿಹರ ಸಾಹಿತ್ಯ ಸಂಗಮದಿಂದ 'ಹರಿಹರ ಶ್ರೀ' ರಾಜ್ಯಮಟ್ಟದ ಪ್ರಶಸ್ತಿ ನೀಡಲು ಕವನ ಸಂಕಲನಗಳನ್ನು ಆಹ್ವಾನಿಸಲಾಗಿದೆ ಎಂದು ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶಪ್ಪ ತಿಳಿಸಿದ್ದಾರೆ.

ಸಂಕಲನಗಳನ್ನು ವಿ.ಬಿ. ಕೊಟ್ರೇಶಪ್ಪ, ಶ್ರೀ ಕುರುವತ್ತಿ ಬಸವೇಶ್ವರ ನಿಲಯ, 3 ನೇ ಮೇನ್, 4 ಕ್ರಾಸ್, ಬಿ ಬ್ಲಾಕ್ ವಿದ್ಯಾನಗರ, ಹರಿಹರ-577601 ಕ್ಕೆ ತಲುಪಿಸಬಹುದು. ಸಂಪರ್ಕಿಸಿ: 98449-69723, 77951-20617.


## ಸವಿನೆನಪು



**ದಿ. ಶ್ರೀ ಎ.ಎಂ. ಆನಂದ ಕುಮಾರ್**

ಹಿರಿಯ ಕಲಾವಿದರು ಮತ್ತು ಸಂಸ್ಥಾಪಕರು, ಭಾರತಿ ವಾದ್ಯ ವೃಂದ

ನಿಧನ : 10.02.2015

**ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.**

ಪತ್ನಿ : ✦ **ಶ್ರೀಮತಿ ಮೀನಾ ಆನಂದ ಕುಮಾರ್** ಪುತ್ರ : ✦ **ಎ.ಎಂ. ಸಚಿನ್ ಮತ್ತು ಶ್ರೀಮತಿ ಸೋನಿ**

ಪುತ್ರಿ : ✦ **ಶ್ರೀಮತಿ ರೇಖಾ ಎ.ನಾಗರಾಜ್,** ಮಾಜಿ ಮಹಾಪೌರರು, ಮಹಾನಗರ ಪಾಲಿಕೆ

ಅಳಿಯ : ✦ **ಎ. ನಾಗರಾಜ್,** ವಿರೋಧ ಪಕ್ಷದ ನಾಯಕರು, ದಾವಣಗೆರೆ ಮಹಾನಗರ ಪಾಲಿಕೆ

ಪುತ್ರಿ : ✦ **ಶ್ರೀಮತಿ ವೀಣಾ ನಾದನ್**

ಮೊಮ್ಮಕ್ಕಳು : ✦ **ಶ್ರೀಮತಿ ರೀಮಾ ವೀರೇಶ್ ✦ ಚಿ. ಸಿ.ಎನ್. ರೂಪಿತ್ ✦ ಕು. ನೇಹ ✦ ಚಿ. ನಿಖಿಲ್ ✦ ಚಿ. ಸೋಹನ್ ✦ ಕು. ಸೋನಲ್ ಹಾಗೂ ಸಹೋದರರು ಮತ್ತು ಬಂಧು-ಮಿತ್ರರು.**

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು

## ಹರಿಹರದ ಹೆಚ್.ಎಂ. ಮಲ್ಲಿಕಾರ್ಜುನಯ್ಯ ನಿಧನ



ಹರಿಹರದ ಶಿವಮೊಗ್ಗ ಸರ್ಕಲ್ ಹತ್ತಿರ, ದೇವಸ್ಥಾನ ರಸ್ತೆ ವಾಸಿಗಳಾದ ದಿ. ಹೆಚ್.ಎಂ. ಕಾಶಿನಾಥಯ್ಯನವರ ಪುತ್ರ

**ಹೆಚ್.ಎಂ. ಮಲ್ಲಿಕಾರ್ಜುನಯ್ಯ**

ಅವರು ದಿನಾಂಕ 8.02.2022ರ ಮಂಗಳವಾರ ರಾತ್ರಿ 10.30ಕ್ಕೆ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶಿವೈಕ್ಯರಿಗೆ ಸುಮಾರು 66 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 10.2.2022ರ ಗುರುವಾರ ಬೆಳಿಗ್ಗೆ 6 ರಿಂದ 12ರವರೆಗೆ ಹರಿಹರದ ಶಿವಮೊಗ್ಗ ಸರ್ಕಲ್ ಹತ್ತಿರ, ದೇವಸ್ಥಾನ ರಸ್ತೆಯಲ್ಲಿರುವ ನಿವಾಸದಲ್ಲಿ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 1 ಗಂಟೆಗೆ ಹರಿಹರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ: 99805 25245, 98801 88499**

## ಶತಾಯುಷಿ ಕಂದಗಲ್ಲು ಗೌಡ್ರು ಗಿರಿಯಪ್ಪರ ಕಲ್ಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದ ವಾಸಿ ದಿ. ಗೌಡ್ರು ಗಿರಿಯಪ್ಪರ ಗುರುಸಿದ್ದಪ್ಪನವರ ಪತ್ನಿ ಹಾಗು ಗೌಡ್ರು ಗಿರಿಯಪ್ಪರ ಬಸವರಾಜಪ್ಪನವರ ತಾಯಿ

**ಶತಾಯುಷಿ ಕಲ್ಲಮ್ಮ**

ಇವರು ದಿನಾಂಕ 9.02.2022ರ ಬುಧವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 114 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.02.2022ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಕಂದಗಲ್ಲು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ: ಮೊ: 7829989582 , 7022844580**

## ತಣಿಗೆರೆ ಜಿ.ಎಸ್. ನಾಗರಾಜಪ್ಪ ನಿಧನ



ದಾವಣಗೆರೆ ಸರಸ್ವತಿ ಬಡಾವಣೆ ಬಿ.ಸಿ.ಎಂ. ಹಾಸ್ಟೆಲ್ ಹತ್ತಿರದ ವಾಸಿ ಗೌಳೇರ ಶಿವಪ್ಪನವರ ಪುತ್ರ **ಜಿ.ಎಸ್. ನಾಗರಾಜಪ್ಪ** ಇವರು, ದಿನಾಂಕ 9.2.2022 ರ ಬುಧವಾರ ರಾತ್ರಿ 7.45 ಕ್ಕೆ ನಿಧನರಾದರು. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 10.2.2022 ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮವಾದ ಚನ್ನಗಿರಿ ತಾಲ್ಲೂಕು ತಣಿಗೆರೆ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ : 72042-28609, 99720-49814**


## ಕೇಸರಿ ಧ್ವಜ ಹಾರಬಹುದು

**(1ನೇ ಪುಟದಿಂದ)** ಮುಂದುವರೆದು ಮಾತಾಡಿದ ಅವರು, ರಾಮ ಮಂದಿರ ನಿರ್ಮಿಸುತ್ತೇವೆ ಎಂದು ನಾವು ಕೆಲ ವರ್ಷಗಳ ಹಿಂದೆ ಹೇಳಿದ್ದರೆ ಕೆಲವರು ನಗುತ್ತಿದ್ದರು. ಈಗ ಮಂದಿರ ನಿರ್ಮಾಣವಾಗುತ್ತಿದೆ. ಈಗ ಹಿಂದುತ್ವದ ಕುರಿತು ಚರ್ಚೆಯಾಗುತ್ತಿದೆ. ಕೇಸರಿ ಧ್ವಜವೂ ಬರಬಹುದು ಎಂದು ಈಶ್ವರಪ್ಪ ತಿಳಿಸಿದ್ದಾರೆ. ಶಿವಮೊಗ್ಗದ ಕಾಲೇಜೊಂದರಲ್ಲಿ ಕೇಸರಿ ಧ್ವಜ ಹಾರಿಸಿದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಕೇಸರಿ ಧ್ವಜ ಎಲ್ಲಿ ಬೇಕಾದರೂ ಹಾರಿಸುತ್ತೇವೆ. ರಾಷ್ಟ್ರಧ್ವಜ ತೆಗೆದು ಕೇಸರಿ ಧ್ವಜ ಹಾರಿಸಿಲ್ಲ. ರಾಷ್ಟ್ರಧ್ವಜ ತೆಗೆಯಲಾಗಿದೆ ಎಂದು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಸುಳ್ಳು ಹೇಳಿದ್ದಾರೆ ಎಂದಿದ್ದಾರೆ.

# ಹೊಸ ಪೀಳಿಗೆಗೆ ಭಜನಾ ಪರಂಪರೆ ಮನವರಿಕೆ ಅಗತ್ಯವಿದೆ



## ರಾಜ್ಯಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ ಕಾರ್ಯಕ್ರಮದಲ್ಲಿ ಅಥಣಿ ಎಸ್. ವೀರಣ್ಣ

ದಾವಣಗೆರೆ, ಫೆ. 9- ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ನಮ್ಮ ನಾಡು, ನುಡಿಯ ಭಕ್ತಿ ಪ್ರಧಾನವಾದ ಸಂಸ್ಕೃತಿ ಮರೆಯಾಗುತ್ತಿರುವುದು ವಿಷಾದದ ಸಂಗತಿ ಎಂದು ಲೆಕ್ಕ ಪರಿಶೋಧಕರಾದ ಅಥಣಿ ಎಸ್. ವೀರಣ್ಣ ತಿಳಿಸಿದರು.

ನಗರದ ಹೊರ ವಲಯದಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆವರಣದಲ್ಲಿ ಮೊನ್ನೆ ಉದ್ಘಾಟನೆಯಾದ 'ರಾಜ್ಯಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ' 3ನೇ ದಿನದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಅವರು ಮಾತನಾಡುತ್ತಿದ್ದರು.

ಪ್ರಸ್ತುತ ದಿನಮಾನಗಳಲ್ಲಿ ಯುವ ಪೀಳಿಗೆ ಮಕ್ಕಳು, ವಿದೇಶಿ ಉಡುಗೆ-ತೊಡುಗೆಯೊಂದಿಗೆ ಟಿ.ವಿ.ಮಾಧ್ಯಮಗಳಲ್ಲಿ ನೃತ್ಯ, ಪಾಶ್ಚಾತ್ಯ ಸಂಗೀತ ಕಾರ್ಯಕ್ರಮಗಳಲ್ಲಿ ಮುಳುಗಿರುವುದು ನಮ್ಮ ಸಂಸ್ಕಾರ, ಸಂಸ್ಕೃತಿಗಳಿಗೆ ಧಕ್ಕೆ ತರುವ ವಾತಾವರಣ ಸೃಷ್ಟಿಯಾಗುತ್ತಿದೆ. ಅದನ್ನು ಹೊರತುಪಡಿಸಿ ನಮ್ಮ ನಾಡಿನ ಆರಾಧನಾ ಕಲೆಗಳನ್ನು ಭಕ್ತಿ, ಭಾವದ ಶಾಸ್ತ್ರೀಯ ಸಂಗೀತದ ಕಡೆಗೆ ಹೊಸ ಪೀಳಿಗೆಗಳಿಗೆ ಮನದಟ್ಟು ಮಾಡುವುದು ಅಭಿಮಾನ ಮೂಡಿಸುವುದು ಕೆಲವು ಸಂಘಟನೆಗಳ ಆದ್ಯ ಕರ್ತವ್ಯವಾಗಿದೆ. ಈ ಹಂತದಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆಶ್ರಯದಲ್ಲಿ ನಿರಂತರವಾಗಿ ಒಂದು ತಿಂಗಳ ಕಾಲ ರಾಜ್ಯ ಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ ಏರ್ಪಡಿಸಿ ನಮ್ಮ ಭಜನಾ ಪರಂಪರೆಯನ್ನು ವೈಭವೀಕರಿಸುವ ಸತ್ಕಾರ್ಯ ನಿಜಕ್ಕೂ ದಾವಣಗೆರೆ ನಗರಕ್ಕೆ ಕಳಸ ಪ್ರಾಯವಾಗಿದೆ ಎಂದು ವೀರಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ ವೀರೇಶ್ವರ ಪುಣ್ಯಾಶ್ರಮದ ಪ್ರಧಾನ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ, ಸಮಿತಿ ಸದಸ್ಯರಾದ ಎ.ಹೆಚ್. ಲಕ್ಷ್ಮೀಭಾಯಾ, ಖಜಾಂಚಿ ಜಿ.ಎನ್. ಕರಿಬಸಪ್ಪ ಜಾಲಿಮರದ, ಸಂಘಟನಾ ಕಾರ್ಯದರ್ಶಿ ಎ.ಕೊಟ್ರಪ್ಪ ಕಿತ್ತೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮಿತಿಯ ಕಾರ್ಯಾಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ಪ್ರಾರಂಭದಲ್ಲಿ ಸ್ವಾಗತಿಸಿದರು.



# ಬಹುಮುಖ ಪ್ರತಿಭೆಯ ಬಸವರಾಜ ಐರಣಿ

*ಪ್ರಸ್ತುತ ಬಸವರಾಜ ಐರಣಿ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಿದ್ದು, ಈ ಪ್ರಶಸ್ತಿ ಅವರ ನಿರಂತರ ಸಾಧನೆಗೆ ಸಂದ ಗೌರವವಾಗಿದೆ. ಕರ್ನಾಟಕ ನಾಟಕ ಅಕಾಡೆಮಿ ಕಲಘಟಗಿಯಲ್ಲಿ ದಿನಾಂಕ 11.02.2022 ರಂದು ಏರ್ಪಡಿಸಿರುವ ಸಮಾರಂಭದಲ್ಲಿ ಐರಣಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.*

✍ ಬಾ.ಮ. ಬಸವರಾಜಯ್ಯ

ಅದು ಅರವತ್ತರ ದಶಕ. ಆಗ ಚಿತ್ರದುರ್ಗ ಅಷ್ಟು ಬಲಿಷ್ಠವಾಗಿ ಬೆಳೆದಿರಲಿಲ್ಲ. ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಗಳಲ್ಲಿ ನಾಟಕಗಳು ಬಹಳ ಜನಪ್ರಿಯವಾಗಿ ನಡೆಯುತ್ತಿದ್ದ ಕಾಲ. ಅದು ಕಂಪನಿ ನಾಟಕಗಳಿರಬಹುದು ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿ ಜಾತ್ರೆಗಳ ಸಂದರ್ಭದಲ್ಲಿ ಹಾರ್ಮೋನಿಯಂ ಮಾಸ್ತರ್‌ಗಳು ಕಲಿಸುತ್ತಿದ್ದ ಹವ್ಯಾಸಿ ನಾಟಕಗಳು ಇರಬಹುದು.





ಜನತಾವಾಣಿ ಪತ್ರಿಕೆ ಪ್ರಾಯೋಜಿಸಿದ 'ಟೋಪಿ ಜನಗಳು' 'ಮುದುಕನ ಮದುವೆ ನಾಟಕದ ಒಂದು ದೃಶ್ಯ

ಹಳ್ಳಿಗಳಲ್ಲಿ ಅಥವಾ ಪಟ್ಟಣ ಪ್ರದೇಶಗಳಲ್ಲಿ ಗಣಪತಿ ಹಬ್ಬ-ಜಾತ್ರೆಗಳಲ್ಲಿ ಯುವಕರು ತಂಡ ಕಟ್ಟಿಕೊಂಡು ನಾಟಕ ಆಡಿ ತಾವೂ ಸಂತೋಷಪಟ್ಟು, ಪೋಷಕರನ್ನೂ ಸಂತೋಷಪಡಿಸುತ್ತಿದ್ದ ಕಾಲ. ಅಂದರೆ ಅರವತ್ತು-ಎಪ್ಪತ್ತರ ದಶಕ. ವೃತ್ತಿ-ಹವ್ಯಾಸಿ ರಂಗಕ್ಕೆ ಆ ಎರಡು, ಮೂರು ದಶಕಗಳು ಸುವರ್ಣಕಾಲ.

ಈ ಕಾಲಘಟ್ಟದಲ್ಲಿ ಬಸವರಾಜ ಐರಣಿ ತನ್ನ ಎಳೆಯ ವಯಸ್ಸಿನಲ್ಲೇ ಬಣ್ಣಹಚ್ಚಿಕೊಂಡು ರಂಗಭೂಮಿ ಪ್ರವೇಶ ಮಾಡಿದ್ದು. ಹವ್ಯಾಸಿ ಹಾಗೂ ಕಂಪನಿ ರಂಗಭೂಮಿ ಎರಡರಲ್ಲೂ ಬಸವರಾಜ ಐರಣಿ ಅವರು ಮಿಂಚಿದ್ದರು. ಕಾರಣ ಅವರ ಧ್ವನಿಸಿರಿ, ಸ್ಪಷ್ಟ ಉಚ್ಚಾರಗಳಿಂದಾಗಿ.

ಪ್ರಿಂಟಿಂಗ್ ಪ್ರೆಸ್ ಮಾಲೀಕರಾಗಿದ್ದ ಐರಣಿ ಚನ್ನಬಸಪ್ಪ ಅವರ ಪುತ್ರರಾದ ಬಸವರಾಜ ಐರಣಿ ಓದಿದ್ದು ಬರೀ ಎಸ್.ಎಸ್.ಎಲ್.ಸಿ. ಆದರೂ ತಿಳಿದುಕೊಂಡದ್ದು ಸ್ನಾತಕೋತ್ತರದ ಎತ್ತರಕ್ಕೆ.

ಬಾಲ ನಟನಾಗಿ ಅಭಿನಯಿಸುತ್ತಿದ್ದ ಬಸವರಾಜ್ ಐರಣಿ ಅವರು, ಅಧಿಕೃತವಾಗಿ ರಂಗಭೂಮಿಯ ಆರಂಗೇಟ್ರಂ ಆದದ್ದು ಖಿಲಾಡಿ ಪತ್ರಿಕೆಯ ಸಂಪಾದಕರಾಗಿದ್ದ ದಿವಂಗತ ಎನ್.ಎಂ. ಪಂಚಾಕ್ಷರಯ್ಯನವರ ಖಿಲಾಡಿ ಮಿತ್ರ ಮಂಡಳಿ ಸಂಸ್ಥೆ ಮೂಲಕ. ಸಂಪನ್ನರ ಸೋಗು ಎಂಬ ಅರ್ಥಗರ್ಭಿತ ನಾಟಕದ ನಾಯಕನ ಪಾತ್ರ ವಹಿಸಿ ಮಿಂಚಿದ್ದರು.

ಈ ಮಧ್ಯ ದಿವಂಗತ ಪಿ. ಹಾಲೇಶಿ, ಬಂಕಾಪುರ ಚನ್ನಬಸಪ್ಪ ಅಂಥವರ ಪ್ರಭಾವಕ್ಕೆ ಬಂದು "ಕನ್ನಡ ಚಳುವಳಿ ನಾಯಕನಾಗಿ ಬೆಳೆಯುತ್ತಾರೆ. ಬಸವರಾಜ ಐರಣಿ ಗೋಕಾಕ್ ಚಳುವಳಿ, ಡಿ.ಡಿ. ಒಂದರಲ್ಲಿ ಕನ್ನಡ ಚಾನಲ್‌ಗಾಗಿ ನಡೆದ ಚಳುವಳಿಯಲ್ಲಿ ಭಾಗವಹಿಸಿ ಪೊಲೀಸ್ ಠಾಣೆ, ಕೋರ್ಟ್ ಅಲೆದವರು.

ಬಸವರಾಜ ಐರಣಿ ಅವರು ಅಭಿನಯಿಸಿದ ಪ್ರಮುಖ ನಾಟಕಗಳೆಂದರೆ "ಸಂಗೊಳ್ಳಿ ರಾಯಣ್ಣ, ನೃಪತುಂಗ, ಛತ್ರಪತಿ ಶಿವಾಜಿ, ನಿಡುಗಲ್ ಪತನ, ಚಿನ್ನದ ಗೊಂಬೆ, ಮುದುಕನ ಮದುವೆ, ಭಲೇ ಮಗಳೆ" ಸೇರಿದಂತೆ ಮೂವತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಇದಲ್ಲದೆ ಹವ್ಯಾಸಿ ನಾಟಕಗಳಲ್ಲೂ ಬಸವರಾಜ ಐರಣಿ ಅಭಿನಯಿಸಿದ್ದಾರೆ. ಜನತಾವಾಣಿ ಪತ್ರಿಕೆ ಸಾದರಪಡಿಸಿದ 'ಟೋಪಿ ಜನಗಳು" (ಈಗ ಸುದ್ದಿಯೊಳಗಿನ ಕಿಚ್ಚು) ಸಂಕ್ರಾಂತಿ, ಬೆಂಗಳೂರಿಗೆ ಬಂದ ಸಾಹಿತಿ, ಬೆಲ್ಲದ ಐಯ್ಯನವರು ಮುಂತಾದ ನಾಟಕಗಳು... ಜೊತೆಗೆ ಬೀದಿ ನಾಟಕಗಳಾದ ಕ್ರಾಂತಿ, ಪರಿಸರ ಜಾಗೃತಿ, ಅಕ್ಷರ ದೀಪ, ಚಂದಿರ ನಮಗೆ ರಂಗಮಂದಿರ, ಬೆಂಕಿ ಮುಂತಾದವುಗಳು ಅಲ್ಲದೆ ರೇಡಿಯೋ ನಾಟಕಗಳಲ್ಲಿ ಧ್ವನಿ ನೀಡಿದ್ದಾರೆ. ಸ್ವತಃ ನಾಟಕಗಳನ್ನು ಬರೆದು, ನಿರ್ದೇಶಿಸಿದ್ದಾರೆ ಬಸವರಾಜ ಐರಣಿ.

ಬಸವರಾಜ ಐರಣಿ ಅವರು ಸ.ಮಾ.ಸ.ಕಲಾ ವೃಂದ, ಶ್ರೀ ಕಲಾ ವೇದಿಕೆ, ಶ್ರೀ ಮದಕರಿ ನಾಯಕ ಕಲಾವೇದಿಕೆ ಸೇರಿದಂತೆ, ಹತ್ತಾರು ಸಂಸ್ಥೆಗಳಲ್ಲಿ ರಂಗ ಸೇವೆ ಸಲ್ಲಿಸಿದ್ದಾರೆ. ಸ್ವತಃ ಪತ್ರಕರ್ತರೂ ಆದ ಬಸವರಾಜ ಐರಣಿ ಅವರಿಗೆ ಹತ್ತು, ಹಲವು ಪ್ರಶಸ್ತಿಗಳು ಸಂದಿವೆ.

ಇವುಗಳಲ್ಲಿ ಮಹಾ ನಗರಪಾಲಿಕೆ ಹಾಗೂ ಜಿಲ್ಲಾಡಳಿತದ ರಾಜ್ಯೋತ್ಸವ ಪ್ರಶಸ್ತಿ, ವೀರಶೈವ ಪಂಚಮಸಾಲಿ ಪ್ರಶಸ್ತಿ, ತಾಲ್ಲೂಕು ಸಾಹಿತ್ಯ ಪರಿಷತ್ತು ಪ್ರಶಸ್ತಿ, ಹಲೋ ಕನ್ನಡಿಗ ಪ್ರಶಸ್ತಿ, ವಿಷ್ಣುಸೇನಾ ಪ್ರಶಸ್ತಿ ಸೇರಿವೆ.

ಪ್ರಸ್ತುತ ಬಸವರಾಜ ಐರಣಿ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಿದ್ದು, ಈ ಪ್ರಶಸ್ತಿ ಅವರ ನಿರಂತರ ಸಾಧನೆಗೆ ಸಂದ ಗೌರವವಾಗಿದೆ.

# ನಮ್ಮ ಸಂಸ್ಕೃತಿಯಲ್ಲಿ ಸೂರ್ಯನಿಗೆ ಅಪಾರ ಮಹತ್ವವಿದೆ



ದಾವಣಗೆರೆ, ಫೆ. 9- ಭಾರತೀಯ ಸಂಸ್ಕೃತಿಯಲ್ಲಿ ಸೂರ್ಯನ ಆರಾಧನೆ-ಉಪಾಸನೆಗೆ ಅಪಾರವಾದ ಮಹತ್ವವಿದೆ. ನಮಸ್ಕಾರ ಪ್ರಿಯನಾದ ಸೂರ್ಯ ಭಗವಾನ್ ನಮ್ಮ ಕಣ್ಣಿಗೆ ಕಾಣುವ ನಿಜವಾದ ದೇವರು ಎಂದು ಆದರ್ಶ ಯೋಗ ಪ್ರತಿಷ್ಠಾನದ ಯೋಗ ಗುರು ಡಾ|| ರಾಘವೇಂದ್ರ ಗುರೂಜಿ ತಿಳಿಸಿದರು.

ರಥಸಪ್ತಮಿಯ ಅಂಗವಾಗಿ ನಗರದ ಆದರ್ಶ ಯೋಗ ಪ್ರತಿಷ್ಠಾನ, ಶ್ರೀ ಮಹಾಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಇಂದು ಏರ್ಪಡಿಸಿದ್ದ 'ಸೂರ್ಯ ನಮಸ್ಕಾರ ಯೋಗ ಯಜ್ಞ' ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

**ಯೋಗ ಗುರು ರಾಘವೇಂದ್ರ ಗುರೂಜಿ**

ನಂತರ 108 ಸೂರ್ಯನ ನಾಮಾವಳಿಯೊಂದಿಗೆ 108 ಸುತ್ತಿನ ಸೂರ್ಯ ನಮಸ್ಕಾರ ಯೋಗ ಪದ್ಧತಿಯನ್ನು ಪ್ರತಿಷ್ಠಾನದ ಯೋಗ ಸಾಧಕರು ಸಾಮೂಹಿಕವಾಗಿ ಪ್ರದರ್ಶನ ನೀಡಿದರು. ಎಂಟು ವರ್ಷದ ಬಾಲಕ ಮಿಥುನ್‌ಕುಮಾರ್‌ರಿಂದ 70 ವರ್ಷದ ನಿವೃತ್ತ ತಹಶೀಲ್ದಾರ್ ಆದ ವಿಶ್ವನಾಥಯ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಲ್.ಐ.ಸಿ. ಅಭಿವೃದ್ಧಿ ಅಧಿಕಾರಿ ಎ.ಆರ್. ಶೇಷಾದ್ರಿ ಮತ್ತು ಅಂಚೆ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀಮತಿ ಸುಮಂಗಲಾ ಶೇಷಾದ್ರಿ ದಂಪತಿ ಪೂಜಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ರಂಗೋಲಿ ಸೇವೆ ಶ್ರೀಮತಿ ಗೌರಮ್ಮ, ಹೂವಿನ ಅಲಂಕಾರ ಸೇವೆ ಹರಿಹರ ಅಂಚೆ ಕಛೇರಿಯ ಶ್ರೀಮತಿ ವೇದಾವತಿ, ಪ್ರಸಾದ ಸೇವೆಯನ್ನು ಅಧ್ಯಾತ್ಮ ಚಿಂತಕ ಹೆಚ್. ಮಂಜುನಾಥ್ ಅವರುಗಳು ಅರ್ಪಿಸಿದರು. ವಿದ್ಯಾರ್ಥಿ ಮುಖೇಶ್ ದೇವ್ ಸಹಕರಿಸಿದರು. ಶ್ರೀಮತಿ ಜ್ಯೋತಿಲಕ್ಷ್ಮೀ ವಾಸುದೇವ್, ಸಗಟು ಔಷಧಿ ವ್ಯಾಪಾರಿ ಸಂದೀಪ್ ವಡೋನಿ, ಭರತ್ ವಡೋನಿ, ಸಮಾಜ ಕಲ್ಯಾಣ ಇಲಾಖೆಯ ಹೆಚ್. ಸಂತೋಷ್, ದೈಹಿಕ ಶಿಕ್ಷಕ ಹೆಚ್.ಎಂ. ನಾಗರಾಜ್, ಲೆಕ್ಕ ಪರಿಶೋಧಕ ಟಿ. ಗಿರೀಶ್, ಶ್ರೀಮತಿ ಭಾಗ್ಯ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಪರೀಕ್ಷೆಗೆ ಪಠ್ಯ ಶಿಕ್ಷಣ, ಬದುಕಿಗೆ ಜೀವನ ಶಿಕ್ಷಣ

## ಹರಿಹರ ಎಸ್.ಜೆ.ವಿ.ಪಿ. ಮಹಾವಿದ್ಯಾಲಯದಲ್ಲಿ ಹೆಚ್.ಬಿ. ಮಂಜುನಾಥ

ಹರಿಹರ, ಫೆ. 9- ವಾರ್ಷಿಕ ಪರೀಕ್ಷೆ ಎದುರಿಸಿ ಅಂಕ ಗಳಿಸಲು ಶಾಲಾ-ಕಾಲೇಜು ಶಿಕ್ಷಣ ಸಾಕು. ಆದರೆ, ಬದುಕು ಎದುರಿಸಲು ಜೀವನ ಶಿಕ್ಷಣ ಬೇಕೇ ಬೇಕು. ಜೀವನ ಶಿಕ್ಷಣವನ್ನು ಪಠ್ಯೇತರ ಚಟುವಟಿಕೆಗಳ ಮೂಲಕವೂ ಪಡೆಯಲು ಸಾಧ್ಯ ಎಂದು ಹಿರಿಯ ಪತ್ರಕರ್ತ ಎಚ್. ಬಿ. ಮಂಜುನಾಥ ಹೇಳಿದರು.



ಇಲ್ಲಿನ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಪದವಿ ಮಹಾವಿದ್ಯಾಲಯದಲ್ಲಿ ಪ್ರಸಕ್ತ ಸಾಲಿನ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಅವರು ಮಾತನಾಡುತ್ತಿದ್ದರು. ಪಠ್ಯೇತರವಾದ ಸಾಂಸ್ಕೃತಿಕ, ಸಾಹಿತ್ಯಿಕ, ಕ್ರೀಡಾ ಮುಂತಾದ ಯಾವುದೇ ಚಟುವಟಿಕೆಗಳಲ್ಲಿ ಭಾರತೀಯವಾದ ಸಂಸ್ಕೃತಿಗೆ ಆದ್ಯತೆ ಕೊಡಬೇಕು. ಭಾರತೀಯವಾದ ಸಂಸ್ಕೃತಿಯಲ್ಲಿ ಸೌಹಾರ್ದತೆಗೂ, ಜೀವನ ಮೌಲ್ಯಗಳಿಗೂ ಪ್ರಾಶಸ್ತ್ಯವಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಡಿ.ಎಂ.ಹಾಲಸ್ವಾಮಿ ಮಾತನಾಡಿ, ಉತ್ತಮ ಕಾರ್ಯಕ್ಕೆ ಯುವಜನತೆಯ ಸ್ಪಂದನೆ ಮುಖ್ಯ ಎಂದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಜಿ.ಎಂ. ಮುರಿಗಿಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಾಂಸ್ಕೃತಿಕ ಹಾಗೂ ಕಲಾ ವೇದಿಕೆಯ ಸಂಯೋಜಕ ಪ್ರೊ.ಸಿದ್ದಯ್ಯ ಎಸ್.ವಿ. ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಶಿಕ್ಷಣ ಸಂಸ್ಥೆಯ ನಿರ್ದೇಶಕ ಎನ್.ಎಂ. ತಿಪ್ಪೇಸ್ವಾಮಿ, ನ್ಯಾಕ್ ಸಂಯೋಜಕ ಪ್ರೊ.ಬಿ. ಕೆ. ಮೊಹಮ್ಮದ್ ಸಾಲೇಹಾ, ಮಾನವ ಹಕ್ಕುಗಳ ವೇದಿಕೆ ಸಂಯೋಜಕ ಪ್ರೊ.ಹೆಚ್. ಎಂ. ವೇದಮೂರ್ತಿ ಆರಾಧ್ಯ, ಮಹಿಳಾ ವೇದಿಕೆಯ ಸಂಯೋಜಕಿ ಡಾ.ಎಂ.ಹೆಚ್. ಶಿವಗಂಗಮ್ಮ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ವೇದಿಕೆ ಸಂಯೋಜಕ ಡಾ.ಪರಮೇಶ್ವರ ನಾಯ್ಕ, ಉದ್ಯೋಗ ಮಾಹಿತಿ ವೇದಿಕೆ ಸಂಯೋಜಕ ಪ್ರೊ. ರಮೇಶ್ ಕೆ. ಪರ್ವತಿ, ಕನ್ನಡ ವಿಭಾಗದ ಮುಖ್ಯಸ್ಥೆ ರೇಣುಕಾ ಸಂಕನಗೌಡರ, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಡಾ.ರಶ್ಮಿ ಜಿ. ಹೆಚ್, ಉರ್ದು ವಿಭಾಗದ ಮುಖ್ಯಸ್ಥ ಅಫ್ಸರ್ ಅಲಿ, ಕಲಾ ವಿಭಾಗದ ವಿದ್ಯಾರ್ಥಿ ಪ್ರತಿನಿಧಿಗಳಾದ ಫೌಜಿಯಾ ಖಾನಂ, ಜಿ. ಹೆಚ್. ಗೌತಮ್ ಉಪಸ್ಥಿತರಿದ್ದರು.

# ಸ್ಮಶಾನ ಭೂಮಿಗಾಗಿ ಅರ್ಜಿ

ದಾವಣಗೆರೆ, ಫೆ.9 - ತಾಲ್ಲೂಕಿನ ವ್ಯಾಪ್ತಿಯ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಸ್ಮಶಾನಕ್ಕೆ ಭೂಮಿ ಕಲ್ಪಿಸಲು ಮತ್ತು ಸರ್ಕಾರಿ ಜಮೀನು ಒತ್ತುವರಿಯಾಗಿರುವ ಬಗ್ಗೆ ಸಾರ್ವಜನಿಕರು ಅರ್ಜಿ ಸಲ್ಲಿಸಬಹುದೆಂದು ದಾವಣಗೆರೆ ತಹಶೀಲ್ದಾರ್ ಬಿ.ಎಸ್ ಗಿರೀಶ್ ತಿಳಿಸಿದ್ದಾರೆ.

ರಾಜ್ಯದಲ್ಲಿನ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಸ್ಮಶಾನ ಭೂಮಿ ಕಲ್ಪಿಸುವುದು ಸರ್ಕಾರದ ಮೂಲ ಉದ್ದೇಶವಾಗಿದ್ದು, ಸ್ಮಶಾನ ಕಲ್ಪಿಸಲು ನಿಯಮಗಳಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗುವಳಿಯ ಸಕ್ರಮೀಕರಣಕ್ಕಾಗಿ ಸಲ್ಲಿಸುವ ಅರ್ಜಿಗಳ ಪೈಕಿ ಅನರ್ಹ ಅರ್ಜಿಗಳು ಇದ್ದಲ್ಲಿ ಜಿಲ್ಲಾಧಿಕಾರಿಗಳ ಹಂತದಲ್ಲಿ ಅಂತಹ ಅನರ್ಹ ಅರ್ಜಿಗಳನ್ನು ವಜಾಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗುವುದು ಎಂದವರು ಹೇಳಿದ್ದಾರೆ.

ಈ ಎಲ್ಲಾ ಕ್ರಮಗಳನ್ನು ಕೈಗೊಂಡ ನಂತರವೂ ಸಹ ಯಾವುದೇ ಗ್ರಾಮದಲ್ಲಿ ಸ್ಮಶಾನಕ್ಕಾಗಿ ಕಾಯ್ದಿರಿಸಲು ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಅಂತಹ ಗ್ರಾಮಗಳಲ್ಲಿ ಮಾರ್ಗಸೂಚಿ ಮೌಲ್ಯದ ಮೂರು ಪಟ್ಟು ದರದಲ್ಲಿ ಖಾಸಗಿಯವರಿಂದ ಜಮೀನುಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.

ಸಾರ್ವಜನಿಕರು ತಮ್ಮ ಗ್ರಾಮಗಳಲ್ಲಿ ಸ್ಮಶಾನದ ಅವಶ್ಯಕತೆ ಇದ್ದಲ್ಲಿ ಜಿಲ್ಲಾಧಿಕಾರಿಗಳಿಗೆ ಅಥವಾ ತಹಶೀಲ್ದಾರ್‌ಗೆ ಅರ್ಜಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ.

ಸರ್ಕಾರಿ ಜಮೀನುಗಳು ಒಂದು ವೇಳೆ ಒತ್ತುವರಿಯಾಗಿದ್ದಲ್ಲಿ, ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ಅಥವಾ ತಹಶೀಲ್ದಾರ್‌ಗೆ ದೂರು ನೀಡಬಹುದು ಎಂದು ತಹಶೀಲ್ದಾರ್ ಗಿರೀಶ್ ತಿಳಿಸಿದ್ದಾರೆ.

# ಹರಿಹರ ಸರ್ಕಾರಿ ನೌಕರರ ಸಂಘದಿಂದ 2022ರ ಕ್ಯಾಲೆಂಡರ್ ಬಿಡುಗಡೆ



ಹರಿಹರ, ಫೆ. 9 - ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ತಾಲ್ಲೂಕು ಸರ್ಕಾರಿ ನೌಕರರ ಸಂಘದಿಂದ ಪ್ರಕಟಿಸಿರುವ 2022ನೇ ಸಾಲಿನ ಕ್ಯಾಲೆಂಡರನ್ನು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಲೋಕಾರ್ಪಣೆ ಮಾಡಿದರು.

ತಾಲ್ಲೂಕು ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಮಾತನಾಡಿ, ದಕ್ಷಿಣ ಕಾಶಿ ಖ್ಯಾತಿಯ ಶ್ರೀ ಹರಿಹರೇಶ್ವರ ದೇವಾಲಯ, ಬಸಿಲಿಕಾ ಖ್ಯಾತಿಯ ಆರೋಗ್ಯ ಮಾತೆ ಚರ್ಚ್, ಪುರಾತನ ಹಳ್ಳದಕೇರಿಯ ಜಾಮಿಯಾ ಮಸೀದಿ ಸೇರಿದಂತೆ ತಾಲ್ಲೂಕಿನ ಪ್ರಮುಖ ಸ್ಥಳಗಳ ಮಾಹಿತಿ ಇದರಲ್ಲಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ, ಬಿಇಒ ಬಿ.ಸಿ.ಸಿದ್ದಪ್ಪ, ಎಡಿಎಲ್‌ಆರ್ ಕಸ್ತೂರಿ, ಜಿಲ್ಲಾ ಕಾರ್ಯದರ್ಶಿ ಗುರುಮೂರ್ತಿ, ರಾಜ್ಯ ಪರಿಷತ್ ಸದಸ್ಯ ರಂಗನಾಥ್, ತಾಲ್ಲೂಕು ಕಾರ್ಯದರ್ಶಿ ಡಿ.ಟಿ.ಮಂಜಪ್ಪ, ಖಜಾಂಚಿ ಶಿವಮೂರ್ತಿ, ಪದಾಧಿಕಾರಿಗಳಾದ ವಿಜಯ ಮಹಾಂತೇಶ್, ಎ.ಕೆ.ಭೂಮೇಶ್, ಎಂ.ಉಮ್ಮಣ್ಣ, ವಿಜಯ ಪ್ರಕಾಶ್, ಪ್ರಕಾಶ್, ತುಕಾರಾಮ್, ಕೃಷ್ಣಪ್ಪ ಭಜಂತ್ರಿ, ಸಂತೋಷ್ ಕುಮಾರ್, ಎಂ.ಬಿ. ಮಂಜುನಾಥ್, ಅಕ್ಷಯ ಕುಮಾರ್, ಜಿ.ಆರ್. ಕಲ್ಲಪ್ಪ, ಮುಷ್ತಾಖ್ ಅಹ್ಮದ್, ಯಶೋದಮ್ಮ, ಶಿವಬಸು ಮತ್ತಿತರರು ಉಪಸ್ಥಿತರಿದ್ದರು.


## ಸಾರ್ವಜನಿಕರ ತಿಳುವಳಿಕೆಗಾಗಿ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ಕಿರಣ್ ಕುಮಾರ್ ಸಿ.ಎಸ್. ಬಿನ್ ಸಿ.ಬಿ. ಶಿವಪುತ್ರಪ್ಪ, ವಯಸ್ಸು 33 ವರ್ಷ, ವ್ಯಾಪಾರ, ವಾಸ # 605/ಎ, ಹದಡಿ ಮುಖ್ಯರಸ್ತೆ, ತರಳಬಾಳು ಬಡಾವಣೆ, ದಾವಣಗೆರೆ ಇವರು ಷೆಡ್ಯೂಲ್ ಸೊತ್ತನ್ನು ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಶಾಮನೂರು ಗ್ರಾಮದ ವಾಸಿಗಳಾದ (1) ಶ್ರೀಮತಿ ಶಾಂತಮ್ಮ ಕೋಂ ದಿವಂಗತ ಬಸವರಾಜಪ್ಪ ಮತ್ತು ಇವರ ಮಗ (2) ಶ್ರೀ ಬಿ. ಅಜ್ಜಪ್ಪ ಬಿನ್ ದಿವಂಗತ ಬಸವರಾಜಪ್ಪ ಇವರುಗಳಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ. ಸದರಿ ಷೆಡ್ಯೂಲ್ ಸೊತ್ತಿನ ಮೇಲೆ ಯಾರದಾದರೂ ಯಾವುದೇ ರೀತಿಯಲ್ಲಾದರೂ ಹಕ್ಕು, ಹಿತಾಸಕ್ತಿಗಳಿದ್ದಲ್ಲಿ ಅಥವಾ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಸಾರ್ವಜನಿಕ ತಿಳುವಳಿಕೆ ಪತ್ರದ ಮುದ್ರಣದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಈ ಕೆಳಗೆ ತಿಳಿಸಿದ ವಕೀಲರಿಗಾಗಲೀ ಅಥವಾ ಅವರ ಪಕ್ಷಗಾರರಿಗಾಗಲೀ ಲಿಖಿತವಾಗಿ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸೊತ್ತನ್ನು ಖರೀದಿಸಲು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಖರೀದಿಸುತ್ತಾರೆ.


### ಷೆಡ್ಯೂಲ್ ಸೊತ್ತಿನ ವಿವರ

ದಾವಣಗೆರೆ ತಾಲ್ಲೂಕು ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಶಾಬನೂರು ಗ್ರಾಮದ ಸರ್ವೇ ನಂ. 214/5ರಲ್ಲಿ ವಿಸ್ತೀರ್ಣ 02 ಎಕರೆ 00 ಗುಂಟೆವುಳ್ಳ ಜಮೀನನ್ನು ಈ ಹಿಂದೆ ವಾಸೋಪಯೋಗಕ್ಕಾಗಿ ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಡಿಎಂಡಿ 398035 ಎ 98 ಬಿಇಎಫ್4, ದಿನಾಂಕ : 14.08.2019ರ ಪ್ರಕಾರ ಅಲಿನೇಷನ್ ಮಂಜೂರಾಗಿದ್ದು, ಸದರಿ ಪ್ರದೇಶದಲ್ಲಿ ವಿಂಗಡಿಸಿರುವ ಸೈಟುಗಳ ಬಗ್ಗೆ ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ದಿನಾಂಕ : 01.09.2021 ರಂದು ಅಂತಿಮ ವಸತಿ ವಿನ್ಯಾಸ ಮಂಜೂರಾತಿ ಪಡೆದು ನಂತರ ಪ್ಲಾನ್‌ನಲ್ಲಿ ಕಂಡ ನಿವೇಶನಗಳಿಗೆ ದಾವಣಗೆರೆ ಮಹಾನಗರಪಾಲಿಕೆ ಯಿಂದ ಡೋರ್ ನಂಬರ್ ಹಾಗೂ ಖಾತೆ ಸಹ ದಾಖಲಾಗಿದ್ದು, ಹಾಲಿ ದಾವಣಗೆರೆ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರತಕ್ಕ ಪ್ಲಾನ್‌ನಲ್ಲಿ ಕಂಡ ಸೈಟ್ ನಂಬರ್ 17 ಇದರ ಮಹಾನಗರಪಾಲಿಕೆ ಚಾಲ್ತಿ ಡೋರ್ ನಂಬರ್ 3409/17 ಅಳತೆ 16.52+16.66/2x09.14 ಮೀಟರ್‌ವುಳ್ಳ ಖಾಲಿ ನಿವೇಶನಕ್ಕೆ **ಚೆಕ್ಕುಬಂದಿ** : ಪೂರ್ವಕ್ಕೆ ; 9.00 ಮೀಟರ್ ಅಗಲದ ರಸ್ತೆ, ಪಶ್ಚಿಮಕ್ಕೆ : 3.00 ಮೀಟರ್ ಬಫರ್ ನಂತರ ಉದ್ಯಾನವನ, ಉತ್ತರಕ್ಕೆ : ಸೈಟ್ ನಂ. 16, ದಕ್ಷಿಣಕ್ಕೆ : ಸೈಟ್ ನಂ. 18 ಈ ಚಕ್ಕುಬಂದಿ ಮಧ್ಯದ ಪೂರಾ ಸೊತ್ತು.


**ಸಹಿ/- ಗಂಗಾಧರ ಪಾಟೀಲ್, ವಕೀಲರು**
**# 2337, 9ನೇ ಮೇನ್, ಎಂಸಿಸಿ ಎ ಬ್ಲಾಕ್,**
**ದಾವಣಗೆರೆ. ಮೊ. : 98447 16044**
**ಸ್ಥಳ : ದಾವಣಗೆರೆ, ದಿನಾಂಕ : 09.02.2022**

**ಸಹಿ/-**
**ಕಿರಣ್‌ಕುಮಾರ್ ಸಿ.ಎಸ್.**
**ಬಿನ್ ಸಿ.ಬಿ. ಶಿವಪುತ್ರಪ್ಪ**
**ಕಕ್ಷಿದಾರರು**


# ಪಂಡರೀಪುರದ ಪುಣ್ಯಭೂಮಿಯಲ್ಲಿ ಭಗವಂತನ ಚಮತ್ಕಾರ



ಪಂಡರೀಪುರದ ಶ್ರೀ ಪಾಂಡುರಂಗನೆಂದರೆ ಅನುಕ್ಷಣ ಆನಂದವಾಗುತ್ತದೆ. ಈ ಹೆಸರಿನಲ್ಲಿ ಯಾವುದೋ ಮಹಿಮೆ ಇದೆ. ಆನಂದವಿದೆ. ಜಗನ್ನಾಟಕ ಸೂತ್ರಧಾರಿಯಾದ ಶ್ರೀ ಪಾಂಡುರಂಗ ತನ್ನ ಭಕ್ತರೊಡನೆ, ಸಂತಮಣಿಗಳೊಡನೆ, ದಾಸಮಣಿಗಳೊಡನೆ ನಡೆಸಿದ ಲೀಲಾ ವಿನೋದಗಳ ಕ್ಷೇತ್ರ. ಇಲ್ಲಿ ನಡೆಸಿದಷ್ಟು ಲೀಲಾ ವಿನೋದಗಳು ವಿಶ್ವದ ಯಾವುದೇ ಕ್ಷೇತ್ರದಲ್ಲಿ ನಡೆದಿಲ್ಲ. ಅದಕ್ಕಾಗಿಯೇ ಅವನ ಅವತಾರವಾಗಿ ನಾದಬ್ರಹ್ಮ ಕ್ಷೇತ್ರವೆಂದು ಕರೆಯುತ್ತಾರೆ. ಅಂದಿನಿಂದ ಇಂದಿನವರೆಗೆ ಭಗವಂತನ ಚಮತ್ಕಾರಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಅಲ್ಲಿ ಜಾತ್ರೆ ಸಮಯದಲ್ಲಿ ಸೇರುವ 30 ರಿಂದ 35 ಲಕ್ಷ ಭಕ್ತ ಜನರೇ ಸಾಕ್ಷಿ. ಈ ಭಕ್ತರು ತಿಂಗಳುಗಟ್ಟಲೆ ತಮ್ಮ ಕುಟುಂಬದ ನಿರ್ವಹಣೆಯನ್ನು ಬಿಟ್ಟು ಭಗವಂತನ ದರುಶನಕ್ಕಾಗಿ ದಶ ದಿಕ್ಕುಗಳಿಂದ ಕಾಲ್ನಡಿಗೆಯಲ್ಲಿ ಬರುವುದನ್ನು ನೋಡಿದರೆ, ಭಗವಂತನ ಮಹಿಮೆ ಏನು ಎಂಬುದನ್ನು ತಿಳಿಯಬಹುದು. ನಾನು ಈ ಕ್ಷೇತ್ರದಲ್ಲಿ ಹತ್ತಕ್ಕು ಹೆಚ್ಚು ದಿನ ತಂಗಿದ್ದು ನೋಡಿದ್ದೇನೆ, ಓಡಾಡಿದ್ದೇನೆ. ಭಕ್ತ ಜನ ಪವಾಡಗಳ ಬಗ್ಗೆ ಹೇಳುವುದನ್ನು ನೋಡಿದರೆ ಮೈಮನ ರೋಮಾಂಚನವಾಗುತ್ತದೆ. ನನಗೂ ಸಹ ಅಲ್ಲಿನ ಭಗವಂತನ ಚಮತ್ಕಾರ ನಡೆದು ಆನಂದದಿಂದ ಮೈಮನ ಪುಳಕಗೊಂಡಿದೆ.



ಈಗ್ಗೆ ಬಹಳ ವರ್ಷಗಳ ಹಿಂದಿನ ಮಾತು. ಆಗಿನ್ನು ನಾನು ಶಿಕ್ಷಕ ವೃತ್ತಿಗೆ ಬಂದಿರಲಿಲ್ಲ ಮತ್ತು 'ಸಂತವಾರಕರೀ' ದೀಕ್ಷೆಯನ್ನು ತೆಗೆದುಕೊಂಡಿರಲಿಲ್ಲ. ನಮ್ಮ ಬಡತನದ ಬೇಗೆ ಇನ್ನು ದೂರವಾಗಿರಲಿಲ್ಲ. ಶ್ರೀ ಪಾಂಡುರಂಗ ಆಗಾಗ್ಗೆ ನನ್ನ ಕನಸಿನಲ್ಲಿ ಬಂದು ದರ್ಶನ ನೀಡುತ್ತಿದ್ದ. ಆ 'ದರ್ಶನ' ನನಗೆ ಅಮೃತ ಸಿಂಚನವಾದಂತಿತ್ತು. ನಾನು ಪ್ರತಿ ವರ್ಷದಂತೆ 1982ರ ಜುಲೈ ತಿಂಗಳ ಪ್ರಥಮ ಏಕಾದಶಿ ಜಾತ್ರೆಗೆಂದು ಹೋಗಿದ್ದೆ. ಆ ಯಾತ್ರೆ ನನ್ನ 'ಬಾಳಿನಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನ' ಜಗದೊಡೆಯ ಶ್ರೀ ಪಾಂಡುರಂಗ ದರುಶನ ನೀಡಿದ ದಿನ. ಅದನ್ನು ನನ್ನ ಜೀವಿತದ ಅವಧಿಯವರೆಗೆ ಮರೆಯಲು ಸಾಧ್ಯವಿಲ್ಲ. ಕಾರಣ ಅದೃಶ್ಯ ನನ್ನನ್ನು ಕಣ್ಮುಂದೆ ಆಗಾಗ್ಗೆ ಮೂಡಿ ಮರೆಯಾಗುತ್ತಿದೆ. ಆ ಜಾತ್ರೆಯ ಒಂದು ದಿನ ಬೆಳಿಗ್ಗೆ 10 ಗಂಟೆಯ ಸಮಯದಲ್ಲಿ ಚಂದ್ರಭಾಗ ನದಿ ತೀರದಲ್ಲಿ ಸ್ನಾನ ಮಾಡಿ ಕುಳಿತಿರುವಾಗ ಒಬ್ಬ ವ್ಯಕ್ತಿಯ ಬಂದರು. ಅವರ ಕೈಯಲ್ಲಿ ಅಷ್ಟೇನು ಮಾಸಿರದ 'ಘಮಘಮಿಸುವ' ಕೆಂಪು ಬಣ್ಣದ ರೇಷ್ಮೆ ವಸ್ತ್ರ ಮತ್ತು ಬಿಳಿ ಕರವಸ್ತ್ರ ಇತ್ತು. ನೇರವಾಗಿ ಅವರು ನನ್ನ ಹತ್ತಿರಕ್ಕೆ ಬಂದರು. ಅವರನ್ನು ನೋಡಿದ ತಕ್ಷಣ ಯಾವುದೋ ಒಂದು ಬಗೆಯ ಅವ್ಯಕ್ತ ಆನಂದದಲ್ಲಿ ತೇಲಾಡಿದಂತಾಯಿತು.

**ನಾಳೆ ಶ್ರೀ ಪುಂಡಲೀಕ ಮಹಾರಾಜರ ಉತ್ಸವ**

ಅವರ ಮುಖ ಕಾಂತಿಯಿಂದ ಕೂಡಿತ್ತು. ತುಳಸಿ, ರುದ್ರಾಕ್ಷಿ ಮಾಲೆಯನ್ನು ಧರಿಸಿದ್ದರು. ನಾನು ಆ ಕ್ಷಣ ಅವರ ಚರಣಕ್ಕೆ ನಮಿಸಿದ ತಕ್ಷಣ ಗಂಟಲು ಒಣಗಿದ ಅನುಭವ, ಮಾತು ಬಾರದೆ ಚಡಪಡಿಸಿದೆ. ಏನು ಮಾಡಬೇಕೆಂದು ತೋಚಲಿಲ್ಲ. ಯಾಂತ್ರಿಕವಾಗಿ ಅವರ ರೇಷ್ಮೆ ವಸ್ತ್ರವನ್ನು ಶುಚಿ ಮಾಡಿ, ಅವರಿಗೆ ನೀಡಿದೆ. ಅವರು ದೇವರ ದರುಶನವಾಯಿತೆ? ಎಂದು ಕೇಳಿದರು. ಹೌದು ಬುದ್ದಿ ಎಂದು ಹೇಳಿದೆ. 'ಮತ್ತೆ ಮಾತು ಬಾರದ ಅನುಭವ' ಮತ್ತೆ ತಾವು ಎಲ್ಲಿರುತ್ತೀರಿ, ಏನು ಮಾಡುತ್ತೀರಿ ಎಂದು ಕೇಳಿದೆ. ಅದಕ್ಕೆ ಅವರು ನಾನು ಎಲ್ಲಾ ಕಡೆ ಇರುತ್ತೇನೆ. 'ನಾನು ರತ್ನ ಪಡಿ ವ್ಯಾಪಾರಿ ಎಂದರು.' ನಮ್ಮೂರಿನ ವಿಳಾಸ, ಜಿಲ್ಲಾ,



\- ಬಾಗೂರು ಜಿ.ಪರಪ್ಪ ಸೇಲ್ಕರ್
ನಿವೃತ್ತ ಶಿಕ್ಷಕರು, ದಾವಣಗೆರೆ.
ಮೊ. 63639-65282

ತಾಲ್ಲೂಕು ಕೇಂದ್ರದ ಹೆಸರು ಹೇಳಿದರು. ನಂತರ ನನ್ನನ್ನು ಹತ್ತಿರ ಕರೆದು 'ಗಣಿಸು ಮತ್ತು ಪೇಡೆಯನ್ನು' ನೀಡಿ ತಲೆಯ ಮೇಲೆ ಕೈಯಾಡಿಸಿ, ನಿಮ್ಮ ಕಷ್ಟಗಳು ಇನ್ನೂ ದೂರವಾಗುತ್ತವೆ. ಇದೇ ಅಕ್ಟೋಬರ್ ತಿಂಗಳಲ್ಲಿ ನಿನಗೆ 'ನೌಕರಿ ಸಿಕ್ಕುತ್ತದೆ' ನೀನು ತಪ್ಪದೇ ಹೋಗು ಎಂದು ಹೇಳಿದರು. ನಾನು ನಿಮ್ಮನ್ನು ಇನ್ನೊಮ್ಮೆ ಭೇಟಿಯಾಗಬೇಕು ಬುದ್ದಿ ಎಂದು ಕೇಳಿದೆ. ಅವರು ಯಾವುದೋ ಛತ್ರದ ಹೆಸರನ್ನು ಹೇಳಿ ನನಗೆ ಸಮಯವಾಯಿತು. ಇನ್ನು ನಾನು ಬರುತ್ತೇನೆ ಎಂದು ಹೊರಟು ಹೋದರು. ನಂತರ ನಾವು ಉಳಿದುಕೊಂಡಿರುವ ಛತ್ರಕ್ಕೆ ಬಂದು ವಿಷಯ ತಿಳಿಸಿದೆ. ಅಲ್ಲಿರುವ ಕೆಲವರು ಒಂದೊಂದು ರೀತಿಯ ವ್ಯಾಖ್ಯಾನ ಮಾಡಿದರು.

ನಂತರ ಊರಿಗೆ ಬಂದು ನಮ್ಮ ಲಾಟರಿ ವ್ಯಾಪಾರದಲ್ಲಿ ಮಗ್ನನಾದೆ. ಅದರ ಮಧ್ಯೆ ಶಿಕ್ಷಕ ವೃತ್ತಿಯ ಸಂದರ್ಶನಕ್ಕೆ ಹೋಗಿ ಬಂದೆ. ಅಕ್ಟೋಬರ್ ತಿಂಗಳು ಬಂದಿತು ನಾನು ವ್ಯಾಪಾರದ ಕಡೆ ಲಕ್ಷ್ಯ (4ನೇ ಪುಟಕ್ಕೆ)


## ನಗರಸಭಾ ಕಾರ್ಯಾಲಯ, ಹರಿಹರ-577601

ಜಿಲ್ಲೆ: ದಾವಣಗೆರೆ ರಾಜ್ಯ: ಕರ್ನಾಟಕ
Website: www.hariharcity.mrc.gov.in Email: itstaff_ulb_harihara@yahoo.com
Phone: 08192-244266 Fax: 08192-241024

ಕ್ರಸಂ:ನಸಹ/ಮಿ.ಸ್/ಸಿಆರ್/08/2021-22 ದಿನಾಂಕ: 07-02-2022

### ದರಪಟ್ಟಿ ಕೋರಿ ಪ್ರಕಟಣೆ

**ವಿಷಯ: ಬೇಡಿಕೆ ಸೂಚನಾ ಪುಸ್ತಕ ಹಾಗೂ ಕ್ಯಾಲ್ ನೋಟೀಸ್ ಪುಸ್ತಕಗಳನ್ನು ಮುದ್ರಿಸಿ ಕೊಡಲು ದರಪಟ್ಟಿ ಕರೆಯುವ ಬಗ್ಗೆ.**

**ಉಲ್ಲೇಖ: ಕೌನ್ಸಿಲ್ ಸಾಮಾನ್ಯ ಸಭೆಯ ಠರಾವು ಸಂಖ್ಯೆ:18 ದಿ:13-01-2022.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹರಿಹರ ನಗರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಆಸ್ತಿಗಳ ಆಸ್ತಿ ತೆರಿಗೆ, ನೀರಿನ ತೆರಿಗೆ, ಒಳ ಚರಂಡಿ ಶುಲ್ಕ ಪಾವತಿಸಲು ಆಸ್ತಿ ತೆರಿಗೆ ಮಾಲೀಕರಿಗೆ ಬೇಡಿಕೆ ಸೂಚನಾ ಪುಸ್ತಕ ಹಾಗೂ ಕ್ಯಾಲ್ ನೋಟೀಸ್ ಪುಸ್ತಕಗಳನ್ನು ಮುದ್ರಿಸಿ ಕೊಡಲು ದರಪಟ್ಟಿ ಕರೆಯಲು ಉಲ್ಲೇಖಿತ ಕೌನ್ಸಿಲ್ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ಬೇಡಿಕೆ ಸೂಚನಾ ಪತ್ರ ಹಾಗೂ ಕ್ಯಾಲ್ ನೋಟೀಸ್ ಪುಸ್ತಕಗಳನ್ನು ಮುದ್ರಿಸಿ ಕೊಡಲು ದರಪಟ್ಟಿ ಕರೆಯಲಾಗಿದ್ದು, ಆಸಕ್ತಿಯುಳ್ಳ ಮುದ್ರಣಾಲಯದವರು ಈ ಪ್ರಕಟಣೆ ಹೊರಡಿಸಿದ 07 ದಿನಗಳೊಳಗಾಗಿ ದರಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕಂದಾಯ ವಿಭಾಗದಲ್ಲಿ ಪಡೆಯಲು ಸೂಚಿಸಲಾಗಿದೆ.

| ಕ್ರ.ಸಂ. | ಸಾಮಾಗ್ರಿಗಳ ವಿವರ | ದರ (ಪ್ರತಿ ಪುಸ್ತಕಕ್ಕೆ) |
|---|---|---|
| 1 | ಬೇಡಿಕೆ ಸೂಚನಾ ಪುಸ್ತಕ | |
| 2 | ಕ್ಯಾಲ್ ನೋಟೀಸ್ ಪುಸ್ತಕ | |

ಸಹಿ/- ಅಧ್ಯಕ್ಷರು, ನಗರಸಭೆ, ಹರಿಹರ. ಸಹಿ/- ಉಪಾಧ್ಯಕ್ಷರು, ನಗರಸಭೆ, ಹರಿಹರ. ಸಹಿ/- ಪೌರಾಯುಕ್ತರು, ನಗರಸಭೆ, ಹರಿಹರ.

ವಾಸಾಸಂಇ/ದಾವಣಗೆರೆ/ಎಸ್‌ಎಸ್‌ಸಿ/718/2020-21

# ಪಂಡರೀಪುರದ ಪುಣ್ಯಭೂಮಿಯಲ್ಲಿ ಭಗವಂತನ ಚಮತ್ಕಾರ

**(3ನೇ ಪುಟದಿಂದ)** ವಹಿಸಿದ್ದರಿಂದ, 'ಸ್ವಾಮೀಜಿ ಹೇಳಿದ್ದು' ನೆನಪಿಗೆ ಬರಲಿಲ್ಲ. ಆಗ ಒಂದು ಚಮತ್ಕಾರವಾಯಿತು. ದಿನಾಂಕ 09.10.1982ರ ಬೆಳಗಿನ ಜಾವ, ನನ್ನ ಕನಸಿನಲ್ಲಿ ಶ್ರೀ ಪಾಂಡುರಂಗ ನನ್ನ ತಲೆ ದಿಂಬಿನ ಹತ್ತಿರ ಸೊಂಟದ ಮೇಲೆ ಕೈಯ್ಯನಿಟ್ಟು ನಿಂತಿದ್ದಾನೆ. ನಾನು ಅವರ ಚರಣ ಕಮಲಕ್ಕೆ ನಮಿಸಿದ್ದೇನೆ. ಅವನು ಕಣ್‌ಬಿಟ್ಟು ಇಂದೇ ನಿನಗೆ ನೌಕರಿಯ ಆದೇಶ ಬರುತ್ತದೆ. ತಪ್ಪದೇ ಹೋಗು ಎಂದು ತಿಳಿಸಿದನು. ಕಣ್‌ತೆರೆದಾಗ ದೇವನಿರಲಿಲ್ಲ. ತಕ್ಷಣ ನಮ್ಮ ತಾಯಿಯವರ ಕನಸಿನಲ್ಲಿ ನಿನ್ನ ಮಗನಿಗೆ ನೌಕರಿ ಆದೇಶ ಬರುತ್ತದೆ. ತಪ್ಪದೇ ತಿಳಿಸು, ತಾಯಿ ಕಣ್‌ಬಿಟ್ಟಾಗ ದೇವನಿರಲಿಲ್ಲ. ಬೆಳಿಗ್ಗೆ 8.30ಕ್ಕೆ ಅಂಚೆಯವನು ಬಂದು ನನ್ನ ನೌಕರಿಯ ಆದೇಶ ವನ್ನು ನೀಡಿದಾಗ ನನ್ನ ಮೈಮನ ರೋಮಾಂಚ ನವಾಯಿತು. ದೇವನ ಕೃಪೆ ನನ್ನ ಮೇಲಿತ್ತು. ಅವನ ಮೇಲಿನ ಭಕ್ತಿಯ ಪರಾಕಾಷ್ಠೆ ಹರಿದು ಬಂದಿತ್ತು. ದೇವನಲ್ಲಿಯ ನನ್ನ ಭಕ್ತಿ ನೂರ್ಮಡಿಯಾಗಿತ್ತು. ಭವರೋಗ ವೈದ್ಯನ ದರುಶನ ನೀಡಿದ ಪರಿಕಂಡು ನಮ್ಮ ಜೀವನ ಪಾವನವಾಯಿತು. ಅವನು ಅಂದು ಒಬ್ಬ ಸ್ವಾಮೀಜಿಯಾಗಿ ದರುಶನ ನೀಡಿದ ಅವನ ಮುಖಕಮಲ ಇಂದಿಗೂ ಪ್ರತಿದಿನ ಮೂಡಿ ಮರೆಯಾಗುತ್ತಿದೆ.

ಅಂದು ನಮ್ಮ ಮನೆಯಲ್ಲಿ ಸಂತೋಷ - ಸಂಭ್ರಮ ಮನೆ ಮಾಡಿತ್ತು. ದೇವನಿಗೆ ವಿಶೇಷವಾದ ಅರ್ಚನೆ ನಡೆದಿತ್ತು. ಮನೆಯಲ್ಲಿನ ಆನಂದಕ್ಕೆ ಪಾರವೇ ಇರಲಿಲ್ಲ. ಬಂಧುಗಳು, ಸ್ನೇಹಿತರಿಗೂ ಪಂಡರೀಪುರದ ಘಟನೆಯನ್ನು ತಿಳಿಸಿದ್ದೆ. ಅವರು ಬಂದು ಬಿಗಿದಪ್ಪಿ, ಶ್ರೀ ಪಾಂಡುರಂಗ ನಿನ್ನ ಭಕ್ತಿಗೊಲಿದಿದ್ದಾನೆ. ಅಂದು ಹೇಳಿದ ಸ್ವಾಮೀಜಿ, ಇಂದು ಕನಸಿನಲ್ಲಿ ಬಂದ ಪಾಂಡುರಂಗ ಎಂತಹ 'ಚಮತ್ಕಾರ' ಅವನ ಲೀಲೆಯನ್ನು ಬಲ್ಲವರಾರು ಎಂದರು. ಅವನ ದರುಶನವನ್ನು ಪಡೆದ ನೀನೆ ಧನ್ಯ ಎಂದರು.

ಅವನು ಕನಸಿನಲ್ಲಿ ಬಂದು ನಿರ್ದೇಶನ ನೀಡಿದಂತೆ, ಶ್ರೀ ಪಾಂಡುರಂಗ ಸುಪ್ರಭಾತ, ಶ್ರೀ ಪಾಂಡುರಂಗ ಶತನಾಮಾವಳಿ, ಶ್ರೀ ಪಾಂಡುರಂಗ ಸ್ತೋತ್ರ, ಶ್ರೀ ಪಾಂಡುರಂಗನ ಸುಂದರವಾದ ಭಕ್ತಿಗೀತೆಗಳನ್ನು ಬರೆಯಿಸಿದ್ದಾನೆ. ನಾನು, ದೇವನು ನನ್ನ ಬುದ್ದಿಗೆ ನೀಡಿದ ಸಾಹಿತ್ಯವನ್ನು ನಿಮಿತ್ತ ಮಾತ್ರವಾಗಿ ಬರೆದಿದ್ದೇನೆ. ಅದನ್ನು ಯಾರ ಮೂಲಕ ಬೆಳಕಿಗೆ ತರುತ್ತಾನೋ ಬಲ್ಲವರಾರು? ಆ ದಿನಕ್ಕಾಗಿ ಕಾಯುತ್ತಲಿದ್ದೇನೆ. ಈ ರೀತಿಯಾಗಿ ನನ್ನಂತಹ ಸಾವಿರ, ಸಾವಿರ ಜನಕ್ಕೆ ಒಂದೊಂದು ರೀತಿಯಲ್ಲಿ ಭಗವಂತನ ಚಮತ್ಕಾರಗಳು ನಡೆದಿವೆ, ನಡೆಯುತ್ತಲಿರುತ್ತವೆ.

ಇದಕ್ಕೆ ಉದಾಹರಣೆಗಾಗಿ ಹೇಳುವುದಾದರೆ, ಇದೇ ದಾವಣಗೆರೆಯ ಪಿ. ಜೆ.ಬಡಾವಣೆಯಲ್ಲಿರುವ ಶ್ರೀನಿವಾಸ ಆಪ್ಟಿಕಲ್ಸ್ ಮಾಲೀಕರ ಕುಟುಂಬವು ಪಂಡರೀಪುರಕ್ಕೆ ಭೇಟಿ ನೀಡಿದಾಗ ರಾತ್ರಿ ಸಮಯವಾಗಿತ್ತು. ನದಿ ಸ್ನಾನದ ನಂತರ, ದೇವನ ದರುಶನಕ್ಕೆ ಬಂದಾಗ ರಾತ್ರಿ 8.40 ರಾತ್ರಿ ವೇಳೆ ದೇವಾಲಯದಲ್ಲಿ ಉಚಿತ ಪ್ರಸಾದದ ವ್ಯವಸ್ಥೆ ಇರುವುದಿಲ್ಲ. ದೇವನ ದರ್ಶನದ ನಂತರ ಮಧ್ಯ ವಯಸ್ಸಿನ ರೇಷ್ಮೆ ವಸ್ತ್ರ ಧರಿಸಿದ ವ್ಯಕ್ತಿಯೊಬ್ಬರು ಪರಿಚಯ ಮಾಡಿಕೊಳ್ಳುವ ನೆಪದಲ್ಲಿ ಧಾರವಾಡದ ಕನ್ನಡ ಭಾಷೆಯಲ್ಲಿ ಮಾತನಾಡಿಸಿ, ಇರೀ ಬಂದೆ ಎಂದು ಹೇಳಿ ಒಂದು ಬಕೆಟ್‌ನಲ್ಲಿ ಅನ್ನ ಇನ್ನೊಂದು ಬಕೆಟ್‌ನಲ್ಲಿ ಸಾರು ತಂದು ಇದು 'ಶ್ರೀ ಪಾಂಡುರಂಗನ ಪ್ರಸಾದ' ಸ್ವೀಕರಿಸಿ ಎಂದು ಹೇಳಿ ಹೊರಟು ಹೋದರು. ಆ ವ್ಯಕ್ತಿಯನ್ನು ನೋಡಿದಾಗ ಭಕ್ತಿಯ ಭಾವನೆ ಉಂಟಾಗಿ ದೇವನು ನೀಡಿದ ಪ್ರಸಾದವನ್ನು ಸ್ವೀಕರಿಸಿದರು. ಆ ವ್ಯಕ್ತಿ ಪುನಃ ನಮ್ಮ ಹತ್ತಿರ ಬರಲಿಲ್ಲ ಎಂದು ಆಶ್ಚರ್ಯದಿಂದ ಹೇಳುತ್ತಾರೆ. ಹೀಗೆ ಪವಾಡಗಳ ನಾಡು ಎಂದು ಈ ಕ್ಷೇತ್ರವನ್ನು ಕರೆಯುತ್ತಾರೆ. ಇನ್ನು ಅತಿ ಮುಖ್ಯವಾದ ವಿಷಯವೆಂದರೆ, ಶ್ರೀ ಪಾಂಡುರಂಗ ವೈಕುಂಠವನ್ನು ತೊರೆದು ಭೂಲೋಕಕ್ಕೆ ಬರಲು ಕಾರಣ ಶ್ರೀ ಪುಂಡಲೀಕರಾಯರು.

ಪುಂಡಲೀಕ ರಾಯರು ಮಾಡುವ ತಂದೆ - ತಾಯಿಯ ಸೇವೆಯನ್ನು ನೋಡಲು ವೈಕುಂಠದಿಂದ ಧಾವಿಸಿ ಬಂದು ಅವರ ಭಕ್ತಿಗೊಲಿದು, ಇಟ್ಟಿಗೆ ಮೇಲೆನಿಂಗ, ಇದನ್ನು ವಿಮರ್ಶೆ ಮಾಡಿ, ನೋಡಿದಾಗ ನಾವೂ ಸಹ ನಮ್ಮ ಮನೆಯಲ್ಲಿರುವ ತಂದೆ - ತಾಯಿಗಳ ಸೇವೆಯನ್ನು ಅವರ ಇಳಿ ವಯಸ್ಸಿನಲ್ಲಿ ತಪ್ಪದೇ ಮಾಡಿರಿ ಎಂಬ ಸಂದೇಶವನ್ನು ಸಾರಿದ್ದಾನೆ. ಯಾರು ತಂದೆ - ತಾಯಿಯ ಸೇವೆ ಮಾಡುತ್ತಾರೋ ನನ್ನ ಕೃಪೆ ಅವರ ಮೇಲಿರುತ್ತದೆ ಎಂದಿದ್ದಾನೆ. ವೇದ, ಶಾಸ್ತ್ರ ಪುರಾಣಗಳು 'ತಂದೆ - ತಾಯಿಗಳಿಗಿಂತ ಮೀಗಿಲಾದ ದೇವರಿಲ್ಲ' ಎಂದಿದೆ.

ನಮ್ಮನ್ನು ಈ ಭೂಮಿಗೆ ತಂದು ಚಿಕ್ಕಂದಿನಲ್ಲಿ ಅಕ್ಕರೆಯಿಂದ ಸಾಕಿ, ಸಲಹಿ ನನ್ನ ಮಗನನ್ನು ಚೆನ್ನಾಗಿ ಆರೈಕೆ ಮಾಡಿ, ದೊಡ್ಡವರನ್ನಾಗಿ ಮಾಡಿ, ಸದಾ ತನ್ನ ಮಗನ ಏಳಿಗೆಯನ್ನು ಕಂಡು ಸಂತೋಷ ಪಡುವ ತಂದೆ - ತಾಯಿಯನ್ನು ಮರೆವರುಂಟೆ ? ಅವರ ಋಣವನ್ನು ತೀರಿಸಲು ಸಾಧ್ಯವೇ ? ಆದ್ದರಿಂದ ನಾವು ನಮ್ಮ ನಮ್ಮ 'ತಂದೆ - ತಾಯಿ, ನಮ್ಮ ದೇವರು' ಇವರ ಸೇವೆ ಯನ್ನು ಬಾಳಿನ ಇಳಿ ವಯಸ್ಸಿನಲ್ಲಿ ಮಾಡುತ್ತಾ ಅವರ ಆಶೀರ್ವಾದವನ್ನು ಪಡೆಯುತ್ತಾ ಮತ್ತು ಭಗವಂತನ ಪ್ರೀತಿಗೆ ಪಾತ್ರರಾಗುತ್ತಾ ನಮ್ಮ ಮನೆಯನ್ನು ನಂದಗೋಕುಲವನ್ನಾಗಿ ಮಾಡಿಕೊಳ್ಳೋಣ ಅಲ್ಲವೇ ? ತಪ್ಪದೇ ಮಾಡೋಣ. ಪ್ರೀತಿಯಿಂದ ಮಾಡೋಣ.

# ದಿ. ಎಂ.ಪಿ. ಪ್ರಕಾಶ್ ಯುವ ರಾಜಕಾರಣಿಗಳಿಗೆ ಮಾದರಿ



**ಹರಪನಹಳ್ಳಿ**

ಹರಪನಹಳ್ಳಿ, ಫೆ. 9- ರಾಜಕೀಯದೊಂದಿಗೆ ಸಾಹಿತ್ಯ, ಸಾಂಸ್ಕೃತಿಕ, ಕಲೆಗಳನ್ನು ರೂಢಿಸಿಕೊಂಡಿದ್ದ ಮಾಜಿ ಉಪ ಮುಖ್ಯಮಂತ್ರಿ ದಿ. ಎಂ.ಪಿ. ಪ್ರಕಾಶ್ ಅವರು ಇಂದಿನ ಯುವ ರಾಜಕಾರಣಿಗಳಿಗೆ ಮಾದರಿ ಎಂದು ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ ಎಂ.ಪಿ. ಲತಾ ಹೇಳಿದರು.

ಪಟ್ಟಣದ ಕಾಂಗ್ರೆಸ್ ಭವನದಲ್ಲಿ ಎಂ.ಪಿ. ಪ್ರಕಾಶ್ ಅವರ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ರಾಜ್ಯ ಕಂಡ ಸಜ್ಜನ ರಾಜಕಾರಣಿಗಳಲ್ಲಿ ಎಂ.ಪಿ. ಪ್ರಕಾಶ್ ಪ್ರಮುಖ ರಾಜಕಾರಣಿಯಾಗಿದ್ದರೂ ಅವರಲ್ಲೊಬ್ಬ ಕಲಾವಿದ, ರಂಗಕರ್ಮಿ, ಓದುಗ ಹಾಗೂ ಸದಭಿರುಚಿಯ ಪ್ರೇಕ್ಷಕನಿದ್ದ. ಅವರೊಬ್ಬ ಸಾಂಸ್ಕೃತಿಕ ರಾಯಭಾರಿಯಾಗಿಯೂ ಆಗಿದ್ದರು ಎಂದರು.

ಸರಳತೆ ಮತ್ತು ಸಜ್ಜನಿಕೆ ಎಂ.ಪಿ.ಪಿ. ಗುರುತಾಗಿತ್ತು. ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ ಯಾವಾಗಲೂ ಸರಳತೆ ಕಾಪಾಡಿಕೊಂಡು ಬಂದಿದ್ದರು. ವಿಧಾನಸೌಧದ ಮೆಟ್ಟಿಲು ಹತ್ತಿದರೂ ಸಾಂಸ್ಕೃತಿಕ ಸಂಬಂಧವನ್ನು ಅವರು ತೊರೆದಿರಲಿಲ್ಲ. ವಿನಯವಂತೂ ಅವರ ಜೀವನ ಶೈಲಿಯಾಗಿತ್ತು. ಈ ಎಲ್ಲ ಗುಣಗಳಿಂದ ಇತರೆ ರಾಜಕಾರ ಣಿಗಳಿಗಿಂತ ಭಿನ್ನವಾಗಿದ್ದರು ಎಂದು ಹೇಳಿದರು.

ರಾಜಕಾರಣದಲ್ಲಿ ಸೋತಾಗಲೆಲ್ಲ ಸಾಂಸ್ಕೃತಿಕ ಲೋಕಕ್ಕೆ ತಮ್ಮನ್ನು ಅರ್ಪಿಸಿಕೊಂಡು ಅದನ್ನು ಬೆಳೆಸುವುದರ ಜೊತೆಗೆ ತಾವೂ ಬೆಳೆದರು. ಎಂಪಿಪಿ ಕುಟುಂಬ ಎಂದಿಗೂ ಜನಮಾನಸದ ನಡುವಯೇ ಇದೆ. ನಾನು ಕೂಡ ನಮ್ಮ ತಂದೆಯ ಹಾದಿಯಲ್ಲಿಯೇ ಸಾಗುತ್ತಿದ್ದೇನೆ ಎಂದು ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಂ. ಬಸವರಾಜಯ್ಯ, ನಂದಿಬೇವೂರು ಗ್ರಾ.ಪಂ. ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್, ಹಲವಾಗಲು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರಾದ ರತ್ನಮ್ಮ ಸೋಮಲಿಂಗಪ್ಪ, ಮುಖಂಡರಾದ ಕಾನಹಳ್ಳಿ ಪಿ.ರುದ್ರಪ್ಪ, ಕಂಚಿಕೇರಿ ಜಯಲಕ್ಷ್ಮಿ, ಗುಂಡಗತ್ತಿ ನೇತ್ರಾವತಿ, ಹುಲಿಕಟ್ಟಿ ಚಂದ್ರಪ್ಪ, ಎಂ.ವಿ. ಶ್ರೀಕಾಂತ, ಮೈದೂರು ಪಿ. ರಾಮಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್, ಹರಿಯಮ್ಮನಹಳ್ಳಿ ಶಿವರಾಜ, ಉದಯಶಂಕರ್, ಕಣಿವಿಹಳ್ಳಿ ಚಂದ್ರಶೇಖರ್, ಉಮಾ ಶಂಕರ್, ಅಲಮರಸಿಕೇರಿ ಮಂಜುನಾಥ್, ತಿಮ್ಮಲಾಪುರ ಈಶ, ಮುನೀರ್, ಶಮಿವುಲ್ಲಾ, ಯು. ಹನುಮಂತ, ಎಲ್. ಮಂಜಾನಾಯ್ಕ ಮತ್ತಿತರರಿದ್ದರು.

# ಇಂಡಿಯನ್ ಡೆಂಟಲ್ ಅಸೋಸಿಯೇಷನ್ ಅಧ್ಯಕ್ಷರಾಗಿ ಡಾ. ಹೊಂಬೇಶ್ ಆಯ್ಕೆ



ದಾವಣಗೆರೆ, ಫೆ.9- ನಗರದ ಇಂಡಿಯನ್ ಡೆಂಟಲ್ ಅಸೋಸಿಯೇಷನ್ನಿನ ಸಾಮಾನ್ಯ ವಾರ್ಷಿಕ ಸಭೆ ಮೊನ್ನೆ ನಡೆದ ಸಂದರ್ಭದಲ್ಲಿ ಅಸೋಸಿಯೇಷನ್ನಿನ ಅಧ್ಯಕ್ಷರಾಗಿ ಡಾ|| ಎಂ.ಎನ್. ಹೊಂಬೇಶ್, ಕಾರ್ಯದರ್ಶಿಯಾಗಿ ಡಾ|| ಬಿ.ಜಿ. ಪ್ರಸನ್ನ, ಖಜಾಂಚಿಯಾಗಿ ಡಾ|| ಬಿ. ಪ್ರವೀಣ್ ಆಯ್ಕೆಯಾಗಿದ್ದಾರೆ.

ಚುನಾಯಿತ ಅಧ್ಯಕ್ಷರಾಗಿ ಡಾ|| ಜಿ.ಎಂ. ಪ್ರಶಾಂತ್, ಉಪಾಧ್ಯಕ್ಷರುಗಳಾಗಿ ಡಾ|| ಜಿ.ಪಿ. ಮಮತಾ, ಡಾ|| ಜಿ.ವಿ. ಪ್ರಮೋದ್ ಮತ್ತು ಡಾ|| ಎ.ಟಿ. ಪ್ರಕಾಶ್ ಆಯ್ಕೆಯಾಗಿದ್ದು, ಸಹಕಾರ್ಯದರ್ಶಿಯಾಗಿ ಡಾ|| ಅಲ್ಲಮ ಪ್ರಭು ಆಯ್ಕೆಯಾಗಿರುತ್ತಾರೆ ಹಾಗೂ ಸಿ.ಡಿ.ಇ. ಛೇರ್ಮನ್ನರಾಗಿ ಡಾ|| ತೇಜಸ್ವಿನಿ, ಡಾ|| ಪಿ. ಕಿರಣ್‌ಕುಮಾರ್ ಆಯ್ಕೆಯಾಗಿದ್ದಾರೆ.

ಸಿಡಿಹೆಚ್ ಪ್ರತಿನಿಧಿಗಳಾಗಿ ಡಾ|| ಎಚ್.ಪಿ. ವಿವೇಕ್, ಡಾ|| ಪಿ.ಬಿ. ಶ್ರೀನಿಧಿ ಹಾಗೂ ಸಂಪಾದಕರಾಗಿ ಡಾ|| ಕೆ.ಪಿ. ಮೋಹನ್, ಉಪ ಸಂಪಾದಕರಾಗಿ ಡಾ|| ಪ್ರಿಯ ಎನ್. ಶಿವ ಆಯ್ಕೆಯಾಗಿದ್ದಾರೆ. ಡಾ|| ಐ.ಎಂ. ಅಲಿ, ಡಾ|| ಅಹಮದ್ ಮುಜೀಬ್ ಮತ್ತು ಡಾ|| ವಿಕ್ರಮ್ ಅಂಬರ್‌ಕರ್ ಅವರುಗಳು ರಾಜ್ಯ ಪ್ರತಿನಿಧಿಗಳಾಗಿದ್ದಾರೆ.

**ಕಾರ್ಯಕಾರಿ ಸದಸ್ಯರುಗಳು :** ಡಾ|| ಎನ್.ಎಂ. ಧನ್ಯಕುಮಾರ್, ಡಾ|| ಕೆ.ಟಿ. ರೂಪ, ಡಾ|| ಎಚ್.ಎಸ್. ಶಶಿಧರ್, ಡಾ|| ಬಿ.ಹೆಚ್. ಧನ್ಯಕುಮಾರ್, ಡಾ|| ಜಿ.ವಿ. ಬಬಿತ, ಡಾ|| ಬಿ.ಆರ್. ಕಿರಣ್, ಡಾ|| ಎಚ್.ಸಿ. ಕಿರಣ್‌ಕುಮಾರ್, ಡಾ|| ಎನ್.ಸಿ. ರಶ್ಮಿ ಡಾ|| ಪ್ರವೀಣ್ ಎಸ್. ಬಸಂಡಿ, ಡಾ|| ಸಂಗೀತ ಸಿದ್ದಬಸಪ್ಪ, ಡಾ|| ಎನ್.ಕೆ. ಸೌಮ್ಯ, ಡಾ|| ಅಶ್ವಿನಿ ರಾಮಕೃಷ್ಣ, ಡಾ|| ಆರ್. ಶೃತಿ, ಡಾ|| ನಿರ್ಮಲಕುಮಾರಿ.

**ಶಾಶ್ವತ ಸಲಹಾ ಸಮಿತಿ ಸದಸ್ಯರುಗಳು :** ಡಾ|| ವಿ.ವಿ. ಸುಬ್ಬಾರೆಡ್ಡಿ, ಡಾ|| ವಸುಂಧರಾ ಶಿವಣ್ಣ, ಡಾ|| ಸದಾಶಿವಶೆಟ್ಟಿ ಹಾಗೂ ಡಾ|| ಶೋಭಾ ಪ್ರಕಾಶ್.

ಐಡಿಎ ಕರ್ನಾಟಕ ರಾಜ್ಯ ಶಾಖಾ ಕಾರ್ಯದರ್ಶಿಯಾಗಿ ಡಾ|| ಎಸ್. ಶಿವಪ್ರಸಾದ್, ಖಜಾಂಚಿಯಾಗಿ ಡಾ|| ವಿ.ಎಚ್. ಸುಶಾಂತ್ ಆಯ್ಕೆಯಾಗಿದ್ದಾರೆ.

# ಹೊನ್ನಾಳಿಯಲ್ಲಿ ನಾಳೆಯಿಂದ 104ನೇ ದಿಂಡಿ ಮಹೋತ್ಸವ



ಹೊನ್ನಾಳಿ, ಫೆ.9- ಪಟ್ಟಣದ ದೊಡ್ಡಪೇಟೆ ಪಾಂಡುರಂಗ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 11 ರ ಶುಕ್ರವಾರದಿಂದ 3 ದಿನಗಳ ಕಾಲ 104ನೇ ದಿಂಡಿ ಮಹೋತ್ಸವ ನಡೆಯಲಿದೆ.

ನಾಡಿದ್ದು ದಿನಾಂಕ 11ರ ಶುಕ್ರವಾರ ಸಂಜೆ 6 ಗಂಟೆಗೆ ನಾಮದೇವ ಸಿಂಪಿ ಸಮಾಜ, ಜ್ಞಾನೇಶ್ವರಿ ವಿದ್ಯಾನಿಧಿ ಸಮಿತಿಯಿಂದ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದ್ದು, ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ನಾಗರಾಜ ಮೂಳೆಕರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅತಿಥಿಗಳಾಗಿ ದಾವಣಗೆರೆ ವಿಶ್ವ ಹಿಂದೂ ಪರಿಷತ್‌ನ ಶಂಕರ ನಾರಾಯಣರಾವ್, ವಿಜಯಕುಮಾರ್ ರಾಕುಂಡಿ, ಹಾನಗಲ್ ಡಾ. ಲಿಂಗರಾಜ್ ಕಠಾರಿ, ಅರಬಗಟ್ಟೆ ಡಾ. ನರೇಂದ್ರ ಹೋವಳೆ, ಸಿಂಪಿ ಸಮಾಜದ ಉಪಾಧ್ಯಕ್ಷ ಜಗನ್ನಾಥರಾವ್ ಹೋವಳೆ, ಮುಖಂಡರಾದ ಪ್ರಹ್ಲಾದರಾವ್, ಸತ್ಯನಾರಾಯಣ ಕಠಾರಿ, ಪಾಂಡುರಂಗ ಹೋವಳೆ ಮತ್ತಿತರರು ಭಾಗವಹಿಸುವರು.

ದಿನಾಂಕ 12ರ ಶನಿವಾರ ರಾತ್ರಿ 10 ಗಂಟೆಗೆ ಆಕಾಶವಾಣಿ ಕಲಾವಿದರಾದ ಯಲ್ಲಾಪುರದ ಗಣಪತಿ ಹೆಗಡೆ ಅವರಿಂದ 'ಸಂತವಾಣಿ' ಕಾರ್ಯಕ್ರಮ ನಡೆಯಲ್ಲಿದ್ದು ನಂತರ ಅಖಂಡ ಜಾಗರಣೆ ಕಾರ್ಯಕ್ರಮ ನಡೆಯಲಿದೆ.

ದಿನಾಂಕ 13 ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ವಿಠಲ ರುಖುಮಾಯಿ ದಿಂಡಿ ಉತ್ಸವದ ರಥೋತ್ಸದ ಮೆರವಣಿಗೆ ನಡೆಯಲಿದೆ.

# ಹಿಂದುಳಿದ ವರ್ಗಗಳಿಂದ ಅರ್ಜಿ

ದಾವಣಗೆರೆ, ಫೆ.9- ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಗಂಗಾ ಕಲ್ಯಾಣ ಯೋಜನೆಗಾಗಿ ಹಿಂದುಳಿದ ವರ್ಗಗಳ ಜನರಿಂದ ಅರ್ಜಿ ಆಹ್ವಾನಿಸಿದೆ.

ಸೌಲಭ್ಯ ಪಡೆಯಲು ಬಯಸುವ ಹಿಂದುಳಿದ ವರ್ಗಗಳ ಜನರಿಂದ (ವಿಶ್ವಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಅಲೆಮಾರಿ/ಅರೆ ಅಲೆಮಾರಿ, ಒಕ್ಕಲಿಗ, ಲಿಂಗಾಯುತ, ಕಾಡುಗೊಲ್ಲ, ಹಟ್ಟಿ ಗೊಲ್ಲ, ಮರಾಠ ಮತ್ತು ಇದರ ಉಪ ಸಮುದಾಯಗಳನ್ನು ಹೊರತುಪಡಿಸಿ) ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮಾರ್ಚ್ 7 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿ ದೂರವಾಣಿ ಸಂಖ್ಯೆ 08192-230934 ಅನ್ನು ಸಂಪರ್ಕಿಸಬಹುದು.

# ನಗರದಲ್ಲಿ ನಾಳೆ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆ

ದಾವಣಗೆರೆ, ಫೆ.9- ಭಾರತ ಸರ್ಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿ ಬರುವ ನೆಹರು ಯುವ ಕೇಂದ್ರದ ವತಿಯಿಂದ ನೆರೆ-ಹೊರೆ ಯುವ-ಸಂಸತ್ತು ಕಾರ್ಯಕ್ರಮದ ನಿಮಿತ್ತ 'ಆತ್ಮನಿರ್ಭರ್ ಭಾರತ-ಸ್ವಾವಲಂಬಿ ಭಾರತವನ್ನು ನಿರ್ಮಾಣ ಮಾಡುವ ಉದ್ದೇಶದ' ಕುರಿತು ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ನಾಡಿದ್ದು ದಿನಾಂಕ 11 ರಂದು ಬೆಳಿಗ್ಗೆ 10 ಕ್ಕೆ ನೆಹರು ಯುವ ಕೇಂದ್ರ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ 42 ಇಲ್ಲಿ ಭಾಷಣ ಸ್ಪರ್ಧೆ ಏರ್ಪಡಿಸಲಾಗಿದ್ದು, ಭಾಗವಹಿಸಲು ವಿದ್ಯಾರ್ಥಿಗಳು 15 ರಿಂದ 29 ರ ವಯಸ್ಸಿನ ಒಳಗಿನವರಾಗಿರಬೇಕು. ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದವರಿಗೆ ರೂ. 8000, ದ್ವಿತೀಯ ರೂ. 4000 ಹಾಗೂ ತೃತೀಯ ರೂ. 2000 ಬಹುಮಾನ ನೀಡಲಾಗುವುದು.

ಆಸಕ್ತರು ನಾಡಿದ್ದು ದಿನಾಂಕ 11 ರಂದು ಬೆಳಿಗ್ಗೆ 10 ಘಂಟೆಗೆ ನೆಹರು ಯುವ ಕೇಂದ್ರ ಕಾರ್ಯಾಲಯದಲ್ಲಿ ಹಾಜರಿರಬೇಕು. ವಿವರಕ್ಕೆ ಮೊಬೈಲ್ ಸಂಖ್ಯೆ 9901863789 ಕ್ಕೆ ಸಂಪರ್ಕಿಸುವಂತೆ ಜಿಲ್ಲಾ ಯುವ ಅಧಿಕಾರಿ ಭುಕ್ಯಾ ಸಂಜೀವ ತಿಳಿಸಿದ್ದಾರೆ.

## ಬಾಡದ ಹೂವುಗಳ ಲತೆ



ಗಾಯನ ಲೋಕದ ಅನರ್ಘ್ಯ ರತ್ನ
ಲತಾ ಮಂಗೇಶ್ಕರ್ ಅಂತ್ಯ
ನಶಿಸಿರುವುದು ಬರೀ ಶರೀರ
ಜೀವಂತವಾಗಿದೆ ಅವರ ಸುಸ್ವರ
ಬಿಟ್ಟು ಹೋಗಿದ್ದಾರೆ ಸ್ವರ ಮಾಧುರ್ಯ
ಇಂಪಾದ ಹಾಡುಗಳ ಸಾಗರ
ಅನಂತವಾಗಿದೆ ಸುಂದರ ಶಾರೀರ

ಕೇಳಿದಾಗಲೆಲ್ಲ ದೇಶಭಕ್ತಿ ಗೀತೆ
ಹೆಮ್ಮೆಯಿಂದ ಬೀಗುವುದು ಮನ
ವೀರಯೋಧರ ಕವಿತೆಯ ಸಾಲು
ತರಿಸುವುದು ಕಣ್ಣಲ್ಲಿ ಕಂಬನಿ
ಪ್ರೀತಿ, ಪ್ರೇಮ, ವಿರಹ, ನೋವು
ಎಲ್ಲಾ ಭಾವಗಳಲ್ಲೂ ಪರಿಪೂರ್ಣತೆ
ಅನನ್ಯ ಕಂಠ ಸಿರಿಯ ಪ್ರಾವೀಣ್ಯತೆ

ಭಾರತ ಮಾತೆಯ ಹೆಮ್ಮೆಯ ಪುತ್ರಿ
ಸಂಗೀತ ಸಾಮ್ರಾಜ್ಯದ ಒಡತಿ
ಗಾನಕಲೆಗಾರರಿಗೆ ಆರಾಧ್ಯ ದೇವತೆ
ಸಹಸ್ರಾರು ಸಮಸ್ವರಗಳ ಲತೆ
ದಿಗ್ಗಜರಿಂದ ದೀದಿ, ಆಯಿ ಎಂಬ ಮಮತೆ
ದಶಕಗಳ ಸಾಧನೆಗೆ ಪ್ರಶಸ್ತಿಗಳ ಮಹಾಪೂರ
ಸಾವಿಲ್ಲ ಕಲೆಗೆ, ನಿಮ್ಮ ಧ್ವನಿ ಅಜರಾಮರ...

**-ಅನುಪಮ ವಿರೂಪಾಕ್ಷಪ್ಪ, ದಾವಣಗೆರೆ**

# ಮುದೇನೂರು ವಿದ್ಯುತ್ ಕೇಂದ್ರದಲ್ಲಿ ಇಂದು ವಿದ್ಯುತ್ ವ್ಯತ್ಯಯ

33ಕೆವಿ ಮುದೇನೂರು ವಿದ್ಯುತ್ ಉಪ-ಕೇಂದ್ರದ ಹನುಮನಹಳ್ಳಿ ಐ.ಪಿ, ಮತ್ತು ನಾಗೇನಹಳ್ಳಿ ಐ.ಪಿ ಮಾರ್ಗಗಳಿಗೆ ತುರ್ತು ನಿರ್ವಹಣೆ ಕೆಲಸ ಕೈಗೊಳ್ಳುವುದರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ರಾಣೇಬೆನ್ನೂರು : ವಿದ್ಯುತ್ ವ್ಯತ್ಯಯ

ಹನುಮನಹಳ್ಳಿ, ನಾಗೇನಹಳ್ಳಿ ಐ.ಪಿ. ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

**ಬೇಕಾಗಿದ್ದಾರೆ**
'ಜನತಾವಾಣಿ' ದಿನಪತ್ರಿಕೆಯಲ್ಲಿ ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಅನುಭವವಿರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಭೇಟಿ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5
ಫೋ. 08192 254736

**ಸೈಟ್ ಮಾರಾಟಕ್ಕೆ**
P. B. ROAD ಸವಣೂರ ಪ್ಲಾಜ್ ಹಿಂಭಾಗ (ಫೈನಲ್ ಅಪ್ರೂವಲ್ )
30x50 ಉತ್ತರ
ಕಿರಣ್ ಬೂಸ್ನೂರ್
9844063409, 9731563409
(J. H. ಪಟೇಲ್ ಬಡಾವಣೆ 20X30 ಪೂರ್ವ)

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30x50 ಉತ್ತರ, ಮಹಾಲಕ್ಷ್ಮಿ ಲೇಔಟ್ ದಾಟಿ ರಶ್ಮಿ ಹಾಸ್ಟೆಲ್ ಹತ್ತಿರ 30x58 ಪೂರ್ವ
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**CHANGE OF NAME**
I, **H. VAIBHAV** S/o H. RAJSEKHAR resident at Plot No. 139, 1st Main, 4th Cross, Basaveshwar Nagar Ballari has changed my Son's name **ANSH H.** to **PUSHKAR H.** infront of Ballari notary on 17.01.2022. In future all records and transactions of my Son's will be in his new name **PUSHKAR H.** only.
-H.VAIBHAV

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60 North, 40x60 East, 40x60 West, 40x60 South, 30x50 East, 30x40 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**SHOPS FOR RENT**
(with Wash Room Facility)
N.R. Road, Davangere.
94483 69523

**ಮನೆಗಳು ಬಾಡಿಗೆಗೆ ಇದೆ**
ಬೆಳ್ಳೂಡಿ ಗಲ್ಲಿಯ ಪಾರಸ್ ಕ್ಲಾತ್ ಸೆಂಟರ್ ಇರುವ ಬಿಲ್ಡಿಂಗ್‌ನಲ್ಲಿ ಸೆಕೆಂಡ್ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂನ ಮನೆ ಮತ್ತು ಗ್ರೌಂಡ್ ಫ್ಲೋರ್ ನಲ್ಲಿ ಡಬಲ್ ಬೆಡ್ ರೂಂನ ಮನೆ ಬಾಡಿಗೆಗೆ ಇವೆ.
99865 44132

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಮಾರಾಟಕ್ಕೆ/ ಖರೀದಿಗೆ ವಿಚಾರಿಸಿರಿ**
ನಂದಿನಿ ಲೇ ಔಟ್ 30x40 ಪೂರ್ವ ಮನೆ ಮೇಲೆ 2 ಅಟ್ಯಾಚ್ಡ್ ರೂಂ
ಬಸವೇಶ್ವರ ಲೇ ಔಟ್ 30x45 ಪಶ್ಚಿಮ
ಎಸ್.ಎಸ್. ಲೇಔಟ್ 40x60ಸೈಟ್ ಉತ್ತರ
ಕುವೆಂಪು ಲೇಔಟ್ 30x50 ದಕ್ಷಿಣ ಸೈಟು ಸೆಮಿ ಕಮರ್ಷಿಯಲ್
ಕೆ.ಬಿ. ಸುರೇಶ್
95911 60520

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್ ಹತ್ತಿರದ ಖಂಡಪ್ಪನ ಗಲ್ಲಿಯಲ್ಲಿ 45x10 ಅಳತೆಯ ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ :
ಮೊ. 94480-47506

**TO LET (ಬಾಡಿಗೆಗೆ)**
ಲೇಡಿಸ್ ಮತ್ತು ಜೆಂಟ್ಸ್ ಪಿ.ಜಿ. ಹಾಗೂ ಹೋಟೆಲ್ ಮಾಡಲು ಸುಸಜ್ಜಿತವಾದ ಬಿಲ್ಡಿಂಗ್ ಬಾಡಿಗೆಗೆ ಇದೆ. ಸಂಪರ್ಕಿಸಿ: ಶುಭ ಸಿರಿ ಬಿಲ್ಡಿಂಗ್, ಹೇಮಾವತಿ ಹಾಸ್ಟೆಲ್ ಎದುರು, BIET ರೋಡ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
80507 02728

**ಬೇಕಾಗಿದ್ದಾರೆ**
ಸಸ್ಯಹಾರಿ ಹೋಟೆಲ್‌ಗೆ ಅಡುಗೆ ಮಾಡಲು ಹಾಗೂ ಸಹಾಯಕರು ಕೂಡಲೇ ಬೇಕಾಗಿದ್ದಾರೆ.
ಸಂಪರ್ಕಿಸಿ:
93537 16855
78999 78299

**ಬೇಕಾಗಿದ್ದಾರೆ**
ದಾವಣಗೆರೆ ಲೋಕಿಕೆರೆ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸೆಕ್ಯೂರಿಟಿ ಕೆಲಸ ಮಾಡಲು ಬೇಕಾಗಿದ್ದಾರೆ. ಕುಟುಂಬದವರಿಗೆ ಆದ್ಯತೆ, ವಸತಿಗೆ ಮನೆ ಇರುತ್ತದೆ.
ಫೋ. : 94481 50174

**HIRING IN CALL CENTER**
FIRST TIME IN DVG
TELE CALLERS (30)
TEAM LEADERS (05)
MANAGER (01)
SMART SALARIES
95382 00008, 95380 03302

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**Site For Sale**
60x66 feet, Udaya Nursing home back Side, JCR Extention,. Chitradurga.
Ph. : 92432 19553

**ಶಾಲಾ ವಾಹನ ಮಾರಾಟಕ್ಕಿದೆ**
Swaraj Mazda (SML)
ಶಾಲಾ ವಾಹನ ಮಾರಾಟಕ್ಕಿದೆ
Model 2008, seating 32+1 ಆಸಕ್ತರು ಸಂಪರ್ಕಿಸಿ
ಫೋ. : 98444 43374

**TO LET**
ಶೋ ರೂಂ ಅಥವಾ ಬಾರ್ & ರೆಸ್ಟೋರೆಂಟ್ ಮಾಡಲು ಸೂಕ್ತವಾದ ಕಟ್ಟಡ ಬಾಡಿಗೆಗೆ ಇದೆ. ಶಿವಗಂಗೆ ಕನ್ವೆನ್ಷನ್ ಹಾಲ್ ಎದುರು, ಹಳೇ ಕುಂದವಾಡ ರಸ್ತೆ, ದಾವಣಗೆರೆ.
80507 02728

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಹಾಗು ದಾವಣಗೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಜಗಳೂರಿನ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಗನ್ ಮ್ಯಾನ್‌ಗಳು ಬೇಕಾಗಿದ್ದಾರೆ. ಊಟ, ವಸತಿ ಹಾಗು ಆಕರ್ಷಕ ಸಂಬಳ ESI +PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
63667 28552, 96060 50591

**Cafe ಗೆ ಕೆಲಸಗಾರರು ಬೇಕಾಗಿದ್ದಾರೆ**
ಹುಡುಗರು/ಹುಡುಗಿಯರು ಸಂಪರ್ಕಿಸಿ : ಸ್ವಿಮ್ಮಿಂಗ್ ಪೂಲ್ ರಸ್ತೆ, ನಂದಿನಿ ಕ್ಯಾಂಟೀನ್ ಹತ್ತಿರ, ದಾವಣಗೆರೆ.
97394 45691, 96203 92069

**HOUSE FOR LEASE/RENT**
2BHK 2ND FLOOR
3rd MAIN, 15TH CROSS
VINOBANAGAR
CONTACT: **MD ISMAIL**
98452 74467

**ಕರಾವಳಿ ಮತ್ಸ್ಯಸಿರಿದರ್ಶಿನಿ ಫಿಶ್‌ಲ್ಯಾಂಡ್**
Sea Food Restaurant
ಪ್ರಾರಂಭವಾಗಿದೆ
Bhagyashree Complex, Swamy Vivekananda Badavane, 2nd Main, BIET College Circle, Davangere.
90083 46784

**Tuitions For**
1st /SSLC/ PCMB/ Comm / Arts/
100 % Results With solved notes.
**Sinchana Academy**
Near Ram & Co Cricle, Davangere
90195 80600, 85532 78258.

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ A.N.M ಮತ್ತು G.N.M. ಆದವರು. ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡಾಟಾದೊಂದಿಗೆ ಸಂಪರ್ಕಿಸಿ.
M: 98450 35710

**ROOM FOR RENT**
Behind Indoor Stadium SS Layout, Davangere.
98446 44718
70190 50911

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**ಬೇಕಾಗಿದ್ದಾರೆ**
Manager, Marketing executive, Tele caller ಹುದ್ದೆಗೆ minimum 2 years experience ಹೊಂದಿರುವ ಯುವಕ ಯುವತಿಯರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ :
90361 12180

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ, ದಾವಣಗೆರೆ
ಮೊ : 81339 33804

**ವಿಚಾರಿಸಿ**
ಗುಣಮಟ್ಟದ ಅಡಿಕೆ ಸಸಿಗಳಿಗೆ ವಿಚಾರಿಸಿ
99866 17127
97425 21453

**ಬೇಕಾಗಿದ್ದಾರೆ**
ದಾವಣಗೆರೆ ತಾಲ್ಲೂಕಿನಲ್ಲಿ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ. ಸಂಪರ್ಕಿಸಿ :
ಫೋ. : 94481 50174

**ಮನೆಗಳು ಬಾಡಿಗೆಗೆ ಬೇಕಾಗಿದೆ**
ವಿದ್ಯಾನಗರ ಸುತ್ತ ಮುತ್ತ 3 ಅಥವಾ 4 ಬೆಡ್‌ರೂಂವುಳ್ಳ ಮನೆ ಬಾಡಿಗೆಗೆ ಬೇಕಾಗಿದೆ.
ಆಸಕ್ತರು ಸಂಪರ್ಕಿಸಿ
94480 55479

**ಅಣಬೆ ಬೆಳೆ ತರಬೇತಿ**
ನಮ್ಮ ಸುಸಜ್ಜಿತ ಫಾರ್ಮ್‌ನಲ್ಲಿ ಪೂರ್ಣ ತರಬೇತಿ ಕಾರ್ಯಕ್ರಮ ಭಾನುವಾರ 13.02.2022 ಸಮಯ ಬೆಳಿಗ್ಗೆ 9.30 ರಿಂದ 5.30
ವಿವರಕ್ಕೆ
Call ; 70194 58980

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
97388 27452
74110 25934

**In Apartment**
3 BHK Flat for Sale
Fully furnished
Location : SS Layout 'B' Block,
For more Details Contact:
lynahalli Channabasappa
99166 12110

**ವಧುಗಳು ಬೇಕಾಗಿದ್ದಾರೆ**
ಲಿಂಗಾಯತ ಅಥವಾ ಸಸ್ಯಹಾರಿಯಾಗಿರುವ 35 ರಿಂದ 50 ವರ್ಷದ ಹೊಸ ಜೀವನ ಬಯಸುವ ವಿಧವೆ, ವಿಚ್ಛೇದಿತ ವಧುಗಳು ಬೇಕಾಗಿದ್ದಾರೆ. (ಮಕ್ಕಳಿದ್ದರೂ ಅಭ್ಯಂತರವಿರುವುದಿಲ್ಲ)
98807 29108

**ಮನೆ ಲೀಜ್‌ಗೆ ಲಭ್ಯವಿವೆ**
ನೆಲ ಮಹಡಿ - 2 ಬೆಡ್ ರೂಂ
1ನೇ ಮಹಡಿ - 3 ಬೆಡ್ ರೂಂ
ಸಂಪರ್ಕಿಸಿ: ಡೋರ್ ನಂ. 91/84/173, ಡಿಸಿಎಂ ಲೇಔಟ್, ಸಿ ಬ್ಲಾಕ್, 1ನೇ ಮೇನ್, 4ನೇ ಕ್ರಾಸ್, HP ಗ್ಯಾಸ್ ಹತ್ತಿರ
99024 12406, 94822 01267

**ಬೇಕಾಗಿದ್ದಾರೆ**
ಹರಿಹರ ನಗರದ ಶಿವಮೊಗ್ಗ ರಸ್ತೆಯ ಮಧು ಹಾರ್ಡ್‌ವೇರ್ ಅಂಗಡಿಯಲ್ಲಿ ಮಾರ್ಕೆಟಿಂಗ್ ಜೊತೆಗೆ ಅಂಗಡಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಬೇಕಾಗಿದ್ದಾರೆ.
ಫೋ. : 98443 24441

**ತುರ್ತಾಗಿ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸರ್ವಿಸ್, ಹೆಲ್ಪರ್ ಹಾಗೂ ಕ್ಲೀನರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ವೇತನದೊಂದಿಗೆ ಊಟ ಮತ್ತು ವಸತಿ ನೀಡಲಾಗುವುದು.
ವಿಳಾಸ :
ಮಮತ ಉಪಹಾರ
ಸಿದ್ದವೀರಪ್ಪ ಬಡಾವಣೆ, BEIT ಕಾಲೇಜ್ ರಸ್ತೆ, ದಾವಣಗೆರೆ.
70902 69155, 99011 60717

**SITE FOR SALE**
15000 sft east facing corner site suitable for Resort , Bunglow or apartment with door number and ready to register in NR lake city.
Contact :
7760747907

**ಹೆಸರು ಬದಲಾವಣೆ**
ಕಶೆಟ್ಟಿ ಶಶಿರೇಖಾ ಆದ ನಾನು ತಿಳಿಸುವುದೇನೆಂದರೆ, ಶಾಲಾ ದಾಖಲಾತಿ ಯಲ್ಲಿ ಹೆಚ್. ಪದ್ಮಾವತಿ ಎಂದು ಇರುತ್ತದೆ. ಆದರೆ ಮದುವೆ ನಂತರ ನನ್ನ ಹೆಸರನ್ನು ನನ್ನ ಪತಿಯ ಮನೆಯವರು ಕಶೆಟ್ಟಿ ಶಶಿರೇಖಾ ಎಂದು ಕರೆಯುತ್ತಿದ್ದರಿಂದ ದಿನಾಂಕ : 05.09.2017ರಂದು ನೋಟರಿ ಸಮ್ಮುಖ ದಲ್ಲಿ ನನ್ನ ಹೆಸರನ್ನು ಕಶೆಟ್ಟಿ ಶಶಿರೇಖಾ ಎಂದು ಬದಲಾಯಿಸಿ ಕೊಂಡಿರುತ್ತೇನೆ. ಇನ್ನು ಮುಂದೆ ನನ್ನ ಎಲ್ಲಾ ಚಟುವಟಿಕೆಗಳು ಈ ಹೆಸರಿನಲ್ಲಿ ಮುಂದುವರೆಯುತ್ತವೆ.

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅಡುಗೆ ಭಟ್ಟರು ಬೇಕಾಗಿದ್ದಾರೆ. ಮಹಿಳೆಯರು ಚಪಾತಿ, ಹೋಳಿಗೆ ಮಾಡುವವರು ಬೇಕಾಗಿದ್ದಾರೆ.
ನಂದಿನಿ ಹೋಟೆಲ್
ಶಕ್ತಿನಗರ, ಜೀನಿಯಸ್ ಶಾಲೆ ಪಕ್ಕ, ದಾವಣಗೆರೆ.
94835 52186

**ಬೇಕಾಗಿದ್ದಾರೆ**
Jewellery shop ನಲ್ಲಿ ಕೆಲಸ ಮಾಡಲು 4-5 ವರ್ಷ experienced ಹೊಂದಿರುವ ಯುವಕ ಯುವತಿಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
96068 64777

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲಸಂಶೋಧಕರು
94492 02888

**ಮನೆ ಬಾಡಿಗೆಗೆ ಬೇಕಾಗಿದೆ**
2 BHK, 3 BHKಯ ಹೊಸ ಮನೆ ಬಾಡಿಗೆಗೆ ಬೇಕಾಗಿದೆ.
90196 95451

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

# ಕೊರೊನಾ ಅಬ್ಬರದ ಮಧ್ಯೆ ಇತರೆ ಗಂಭೀರ ಕಾಯಿಲೆಗಳ ಪರಿಣಾಮ ಮರೆತೇ ಬಿಟ್ಟಿದ್ದೇವೆ

## 'ವಿಶ್ವ ಕ್ಯಾನ್ಸರ್ ಜಾಗೃತಿ ದಿನ'ಸಮಾರಂಭದಲ್ಲಿ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ



ಹೊನ್ನಾಳಿ, ಫೆ.9 - ಕ್ಯಾನ್ಸರ್ ಕಾಯಿಲೆ ಬಂದ ತಕ್ಷಣ ಯಾರೂ ಹೆದರಬಾರದು. ಸಕಾಲಕ್ಕೆ ಸೂಕ್ತ ಚಿಕಿತ್ಸೆ ನೀಡುವುದರಿಂದ ಗುಣಪಡಿಸಬಹುದು ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಮತಿ ಎಂ.ಎಚ್. ಗೀತಾ ಹೇಳಿದರು.

ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಕತ್ತಿಗೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ತಾಲ್ಲೂಕಿನ ಹನುಮಸಾಗರ ತಾಂಡಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ 'ವಿಶ್ವ ಕ್ಯಾನ್ಸರ್ ಜಾಗೃತಿ ದಿನ'ಸಮಾರಂಭದಲ್ಲಿ ಅವರು ಮಾತನಾಡಿದರು.

ಕಳೆದೆರಡು ವರ್ಷಗಳಿಂದ ಕೊರೊನಾ ವೈರಸ್ ಸೋಂಕಿನ ಅಬ್ಬರದ ನಡುವೆ ಬೇರೆ ಕಾಯಿಲೆಗಳ ಗಂಭೀರ ಪರಿಣಾಮದ ಬಗ್ಗೆ ನಾವೆಲ್ಲರೂ ಮರೆತೇ ಬಿಟ್ಟಿದ್ದೇವೆ. ಹಾಗಾಗಿ, ಇನ್ನು ಮುಂದಾದರೂ ಕೊರೊನಾ ಹೊರತಾಗಿ ಇತರೆ ಕಾಯಿಲೆಗಳ ಬಗ್ಗೆ ಎಲ್ಲರೂ ಗಮನಹರಿಸಬೇಕು ಎಂದು ತಿಳಿಸಿದರು.

ಮನುಷ್ಯನ ದೇಹದಲ್ಲಿನ ಜೀವ ಕೋಶಗಳ ಅನಿಯಂತ್ರಿತ ಬೆಳವಣಿಗೆ, ಊತ, ಗಂಟುಗಳಿಂದ ಬರುವ ಕೀವು, ದೇಹದ ವಿವಿಧ ಭಾಗಗಳಿಂದ ರಕ್ತ ಸ್ರಾವ ಹೆಚ್ಚಾಗಿ ಕ್ಯಾನ್ಸರ್ ಕಾಯಿಲೆ ತೀವ್ರಗೊಳ್ಳುವ ಸಾಧ್ಯತೆ ಇರುತ್ತದೆ. ಪ್ರಾರಂಭದ ಹಂತದಲ್ಲೇ ಪತ್ತೆ ಹಚ್ಚಿದರೆ ಕ್ಯಾನ್ಸರ್ ಕಾಯಿಲೆಯನ್ನು ಗುಣಪಡಿಸಬಹುದು ಎಂದು ವಿವರಿಸಿದರು.

ವೈದ್ಯಾಧಿಕಾರಿ ಡಾ. ಮಲ್ಲಿಕಾರ್ಜುನ್ ಮಾತನಾಡಿ, ಕ್ಯಾನ್ಸರ್ ಕಾಯಿಲೆ ಮನುಷ್ಯನ ದೇಹದ ಯಾವುದೇ ಭಾಗಕ್ಕಾದರೂ ಬರಬಹುದು. ಅದಕ್ಕೆ ವಯಸ್ಸಿನ ಮಿತಿ ಯಿಲ್ಲ. ರಾಸಾಯನಿಕಗಳ ಸೇವನೆ, ಹಾರ್ಮೋನ್‌ಗಳ ವೈಪರೀತ್ಯದಿಂದ ಹೆಚ್ಚಾಗಿ ಕ್ಯಾನ್ಸರ್ ಕಾಯಿಲೆ ಬರುತ್ತದೆ. ಆದ್ದರಿಂದ, ಎಲ್ಲರೂ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುತ್ತಿರಬೇಕು ಎಂದು ಹೇಳಿದರು.

ಶಾಲೆಯ ಶಿಕ್ಷಕರು, ಆರೋಗ್ಯ ಇಲಾಖೆಯ ಸಿಬ್ಬಂದಿ ಪ್ರೇಮಾ, ರುಕ್ಮಂಗಳ, ಚಾಮುಂಡಿ, ಚಂದ್ರಶೇಖರ್ ಇತರರು ಇದ್ದರು.

## ಶ್ರೀ ಕೃಷ್ಣ ಕಲಾಮಂದಿರಕ್ಕೆ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಸೌಹಾರ್ದ ಭೇಟಿ



ದಾವಣಗೆರೆ, ಫೆ.9- ಸ್ಥಳೀಯ ವಿನೋಬನಗರದಲ್ಲಿರುವ ಶ್ರೀ ಕೃಷ್ಣ ಸೇವಾ ಟ್ರಸ್ಟ್‌ನ ಶ್ರೀಕೃಷ್ಣ ಕಲಾ ಮಂದಿರ ಹಾಗೂ ಶ್ರೀ ಕೃಷ್ಣ ವಿದ್ಯಾರ್ಥಿ ನಿಲಯಕ್ಕೆ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಇಂದು ಸೌಹಾರ್ದ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಟ್ರಸ್ಟ್ ಕಾರ್ಯದರ್ಶಿ ಡಿ. ಅನಂತಯ್ಯ, ಕಾರ್ಯಾಧ್ಯಕ್ಷ ಕೆ.ಎ. ವಿಠ್ಠಲ್, ಸಹ ಕಾರ್ಯದರ್ಶಿ ಬಾಲಕೃಷ್ಣ ವೈದ್ಯ, ಟ್ರಸ್ಟಿಗಳಾದ ಹೆಜ್ನ ನಾರಾಯಣ ಭಟ್, ಕೆ.ಪದ್ಮನಾಭ ಭಟ್ ಹಾಗೂ ಇತರರು ಉಪಸ್ಥಿತರಿದ್ದರು.

## ಪೂರ್ಣ ಪೀಠದಿಂದ ಹಿಜಾಬ್ ಅರ್ಜಿಗಳ ವಿಚಾರಣೆ

ಬೆಂಗಳೂರು, ಫೆ.9 – ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಅರ್ಜಿಗಳ ವಿಚಾರಣೆಗಾಗಿ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ಅವರು ತಮ್ಮ ನೇತೃತ್ವದ ಮೂವರು ಸದಸ್ಯರ ಪೂರ್ಣ ಪೀಠ ರಚಿಸಿದ್ದಾರೆ. ಇದರಲ್ಲಿ ಮುಖ್ಯ ನ್ಯಾಯ ಮೂರ್ತಿ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ಜೆ.ಎಂ. ಖಾಜಿ ಅವರಿದ್ದಾರೆ.

ನ್ಯಾಯಮೂರ್ತಿ ದೀಕ್ಷಿತ್ ಅವರು ಈ ವಿಷಯದ ವಿಚಾರಣೆಗೆ ವಿಸ್ತೃತ ಪೀಠ ರಚಿಸಬೇಕಿದೆ ಎಂದಿದ್ದರು. ನಂತರ ಅವರು ವಿಷಯವನ್ನು ಮುಖ್ಯ ನ್ಯಾಯಮೂರ್ತಿ ಅವಸ್ಥಿ ಪರಿಶೀಲನೆಗೆ ವಹಿಸಿದ್ದರು. ಈಗ ಪೂರ್ಣ ಪೀಠ ಗುರುವಾರ ವಿಚಾರಣೆ ಆರಂಭಿಸಲಿದೆ.

ಮಂಗಳವಾರದಿಂದ ಅರ್ಜಿಗಳ ವಿಚಾರಣೆ ನಡೆಸುತ್ತಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ಈ ಅರ್ಜಿಗಳಿಂದ ಸಂವಿಧಾನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಉದ್ಭವಿಸಿವೆ. ಇದರಲ್ಲಿ ವೈಯಕ್ತಿಕ ಕಾನೂನಿಗೆ ಸಂಬಂಧಿಸಿದ ವಿಷಯಗಳಿವೆ ಎಂದಿದ್ದರು. ವಿಷಯದ ಪ್ರಾಮುಖ್ಯತೆ ಹಿನ್ನೆಲೆಯಲ್ಲಿ, ಇದನ್ನು ವಿಸ್ತೃತ ಪೀಠವೇ ಇತ್ಯರ್ಥ ಪಡಿಸಬೇಕು ಎಂದು ನ್ಯಾಯಮೂರ್ತಿ ದೀಕ್ಷಿತ್ ಹೇಳಿದ್ದರು.

ಮುಖ್ಯ ನ್ಯಾಯಮೂರ್ತಿ ಅವಸ್ಥಿ ಅವರು ತಮ್ಮ ವಿವೇಚನೆ ಮೇಲೆ ರಚಿಸುವ ವಿಸ್ತೃತ ಪೀಠವೇ ಮಧ್ಯಂತರ ಆದೇಶ ಹೊರಡಿಸುವ ಕುರಿತು ನಿರ್ಧರಿಸಬೇಕು ಎಂದು ನ್ಯಾಯಮೂರ್ತಿ ದೀಕ್ಷಿತ್ ತಿಳಿಸಿದ್ದರು.

ಪಿ.ಯು. ಕಾಲೇಜಿನಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ಉಡುಪಿಯ ಕೆಲ ವಿದ್ಯಾರ್ಥಿನಿಯರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

## ಕಂಕಣ ಧಾರಣೆಯೊಂದಿಗೆ ಐತಿಹಾಸಿಕ ಮೈಲಾರ ಜಾತ್ರೆಗೆ ಚಾಲನೆ

ಹೂವಿನಹಡಗಲಿ,ಫೆ.9- ಇತಿಹಾಸ ಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ರಥ ಸಪ್ತಮಿಯ ದಿನವಾದ ಮಂಗಳವಾರ ಹಾಲು ಉಕ್ಕಿಸುವ ಮೂಲಕ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ವಾರ್ಷಿಕ ಜಾತ್ರೆಗೆ ವಿಧ್ಯುಕ್ತ ಚಾಲನೆ ನೀಡಲಾಯಿತು.

ಕ್ಷೇತ್ರದಲ್ಲಿ ಧಾರ್ಮಿಕ ಪರಂಪರೆಗೆ ಅನುಗುಣವಾಗಿ ಸ್ವಾಮಿಗೆ ಕಂಕಣಧಾರಣೆ ಮಾಡಿ ನಂತರ ವಂಶಪಾರಂಪರ್ಯ ಧರ್ಮಕರ್ತರಾದ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್ ಕಾರಣಿಕ ನುಡಿಯುವ ರಾಮಣ್ಣ ಗೊರವಯ್ಯನಿಗೆ ಹಾಗೂ ಬಾಬುದಾರರಿಗೆ ಕಂಕಣ ಧಾರಣೆ ಮಾಡಿದರು. ದೇವಸ್ಥಾನದ ರಂಗಮಂಟಪದಲ್ಲಿ ಕಾರಣಿಕದ ಬಿಲ್ಲಿಗೆ ಪೂಜೆ ಸಲ್ಲಿಸಲಾಯಿತು. ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಎಂ.ಎಚ್. ಪ್ರಕಾಶ್‌ರಾವ್, ಅರ್ಚಕ ಪ್ರಮೋದ್ ಭಟ್, ಬಾಬುದಾರರು ಮತ್ತು ಸ್ಥಳೀಯರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.

ರಥಸಪ್ತಮಿಯ ಆಚರಣೆಯ ಬಳಿಕ ಶ್ರೀ ಸ್ವಾಮಿಯ ಉತ್ಸವವು ಮೌನ ಸವಾರಿಯೊಂದಿಗೆ ಡೆಂಕನ ಮರಡಿಗೆ ಸಾಗಿತು. ಕಾರಣಿಕದ ಹೊರಗೆ ಸ್ವಾಮಿ ಉತ್ಸವಮೂರ್ತಿ ಮರಡಿಯಲ್ಲಿ ಪ್ರತಿಷ್ಠಾಪನೆಗೊಳ್ಳುವುದರಿಂದ ದೇವಸ್ಥಾನದಲ್ಲಿ ಹನ್ನೊಂದು ದಿನಗಳವರೆಗೆ ಪೂಜೆ ಹಾಗೂ ಗಂಟೆಯನಾದ ಯಾವುದೂ ಮೊಳಗುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಬಾರಿಯೂ ಇದೇ ದಿನಾಂಕ 18ರಂದು ಸರಳ ಕಾರಣಿಕೋತ್ಸವ ನೆರವೇರಲಿದೆ.

ಕೊರೊನಾ ಭೀತಿಯ ಹಿನ್ನೆಲೆಯಲ್ಲಿ ಇಂದಿನಿಂದ ಇದೇ ದಿನಾಂಕ 19 ರವರೆಗೆ ಸುಕ್ಷೇತ್ರದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ಹೊರಗಿನ ಭಕ್ತರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ.

## ನಗರದಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತಿ



ದಾವಣಗೆರೆ, ಫೆ.9- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸವಿತಾ ಮಹರ್ಷಿ ಜಯಂತಿಯನ್ನು ಜಿಲ್ಲಾಡಳಿತ ಭವನದಲ್ಲಿ ಸರಳವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ್, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಡಿಯುಡಿಸಿ ಯೋಜನಾಧಿಕಾರಿ ನಜ್ಮಾ, ಮೇಯರ್ ಎಸ್.ಟಿ. ವೀರೇಶ್, ಸವಿತಾ ಸಮಾಜದ ಅಧ್ಯಕ್ಷ ಬಾಲರಾಜ್, ಮುಖಂಡರಾದ ರಂಗಸ್ವಾಮಿ ಸೇರಿದಂತೆ, ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಿವಕುಮಾರಸ್ವಾಮಿ ಬಡಾವಣೆ, 1 ಮತ್ತು 2ನೇ ಹಂತ, ಉದಯ ಮಾರ್ಟ್, ಚಿಕ್ಕಮ್ಮಣ್ಣಿ ದೇವರಾಜ ಅರಸು ಬಡಾವಣೆ, ತರಳಬಾಳು ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ತರಳಬಾಳು ಬಡಾವಣೆ, ವಾಣಿ ರೈಸ್ ಮಿಲ್ ಹಿಂಭಾಗ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ನೂತನ ಪಂಚ ದೇವಸ್ಥಾನಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ

ಶಿವಾಲಿ ಚಿತ್ರ ಮಂದಿರ ರಸ್ತೆಯ ಶ್ರೀ ಶಬರಿಗಿರೀಶ ಸೇವಾ ಸಮಿತಿ ವತಿಯಿಂದ ಇಂದು ಬೆಳಿಗ್ಗೆ 7.30 ರಿಂದ 10.30 ರವರೆಗೆ ನೂತನ ಪಂಚ ದೇವಸ್ಥಾನಗಳ ನಿರ್ಮಾಣದ ಶಂಕುಸ್ಥಾಪನೆ ನೆರವೇರಲಿದೆ.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿ.ಎಂ. ಸಿದ್ದೇಶ್ವರ, ಎಸ್.ಟಿ. ವೀರೇಶ್, ದೇವರಮನಿ ಶಿವಕುಮಾರ್, ಬಿ.ಜಿ. ಅಜಯಕುಮಾರ್, ಗಾಯತ್ರಿಬಾಯಿ ಖಂಡೋಜಿರಾವ್, ಪ್ರಸನ್ನಕುಮಾರ್, ರವಿರಾಜ್, ರಾಜನಹಳ್ಳಿ ಶಿವಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಲೋಕಿಕೆರೆ ನಾಗರಾಜ್, ಬಕ್ಕಣ್ಣ, ಕರಿಗಾರ ಮಂಜುನಾಥ್, ರಮೇಶ್ ಅಂಬರ್‌ಕರ್, ಡಾ. ಮಲ್ಲಿಕಾರ್ಜುನಪ್ಪ, ವಾಸುದೇವ ರಾಯ್ಕರ್ ಮತ್ತಿತರರು ಭಾಗವಹಿಸಲಿದ್ದಾರೆ.

## ಕಡಲಬಾಳು : ಇಂದು ಶ್ರೀಮಧ್ವ ನವಮಿಯ ತೇರು

ದಾವಣಗೆರೆ ತಾಲ್ಲೂಕಿನ ಶ್ರೀ ಕ್ಷೇತ್ರ ಕಡಲಬಾಳು, ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿಟಬಲ್ ಟ್ರಸ್ಟ್‌ನಿಂದ ಇತಿಹಾಸ ಪ್ರಸಿದ್ಧ ಶ್ರೀಮಧ್ವ ನವಮಿ ರಥೋತ್ಸವ ನಡೆಯಲಿದೆ ಎಂದು ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿಟಬಲ್ ಟ್ರಸ್ಟ್ ತಿಳಿಸಿದೆ.

## ನಾಳೆ ಪಾಲಿಕೆ ಸಾಮಾನ್ಯ ಸಭೆ

ದಾವಣಗೆರೆ, ಫೆ.9-ನಗರ ಪಾಲಿಕೆ ಸಾಮಾನ್ಯ ಸಭೆ ದಿನಾಂಕ 11 ರ ಶುಕ್ರವಾರ ಬೆಳಿಗ್ಗೆ 11 ಕ್ಕೆ ಮಹಾಪೌರ ಎಸ್.ಟಿ. ವೀರೇಶ್ ಅಧ್ಯಕ್ಷತೆಯಲ್ಲಿ ಜರುಗಲಿದೆ.



## ರಾಜನಹಳ್ಳಿಯಲ್ಲಿ ಸರಳವಾಗಿ ಜರುಗಿದ ವಾಲ್ಮೀಕಿ ರಥೋತ್ಸವ

ಮಲೇಬೆನ್ನೂರು, ಫೆ.9 - ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬುಧವಾರ ಬೆಳಗ್ಗೆ ವಾಲ್ಮೀಕಿ ರಥೋತ್ಸವವು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಸರಳವಾಗಿ ಜರುಗಿತು. ಶಾಸಕ ಟಿ.ರಘುಮೂರ್ತಿ, ಶ್ರೀಮತಿ ಶಾಂತಲಾ ರಾಜಣ್ಣ, ಹರ್ತಿಕೋಟೆ ವೀರೇಂದ್ರಸಿಂಹ, ಹೊಸಪೇಟೆ ಜಂಬಣ್ಣ ನಾಯಕ, ಟಿ.ಈಶ್ವರ್, ಎಂ.ನಾಗೇಂದ್ರಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಐತಿಹಾಸಿಕ ಮೈಲಾರ ಜಾತ್ರೆ : ನಿರ್ಬಂಧ



**(1ನೇ ಪುಟದಿಂದ)** ನಿಯಮಗಳನ್ನು ಅನುಸರಿಸಬೇಕು ಎಂದರು. ಜಿಲ್ಲಾಧಿಕಾರಿ ಮತ್ತು ಸರ್ಕಲ್ ಇನ್ಸ್ ಪೆಕ್ಟ ರ್‌ಗಳಿಗೆ ಕೊರೊನಾ ಪಾಸಿಟಿವ್ ಬಂದಿರುವುದನ್ನು ಸಭೆಯ ಗಮನಕ್ಕೆ ತಂದ ಅವರು, ಸಹಾಯವಾಣಿಯನ್ನು ಜಾರಿ ಇಡಲಾಗುವುದು. ಅಗತ್ಯ ಬಿದ್ದಲ್ಲಿ ಭಕ್ತರು 112 ಕ್ಕೆ ಕರೆ ಮಾಡಬಹುದು ಎಂದರು.

ಶಾಸಕ ಪಿ. ಟಿ. ಪರಮೇಶ್ವರ್ ನಾಯ್ಕ್ ಮಾತನಾಡುತ್ತಾ ಕಳೆದ ವರ್ಷದಂತೆ ಈ ವರ್ಷವೂ ಮೈಲಾರ ಜಾತ್ರೆಯನ್ನು ಸರ್ಕಾರ ನಿಷೇಧಿಸಿದೆ, ಆದರೆ ಸಂಪ್ರದಾಯ, ಪದ್ಧತಿಯಂತೆ ಧಾರ್ಮಿಕ ವಿಧಿ, ವಿಧಾನಗಳು ಎಂದಿನಂತೆ ಜರುಗುತ್ತವೆ

ಜಾತ್ರಾ ಸಮಯದಲ್ಲಿ ಮೈಲಾರದಲ್ಲಿ ನೈರ್ಮಲ್ಯೀಕರಣ, ರಸ್ತೆ ದುರಸ್ತಿ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಜರುಗಿಸಲಾಗುವುದು. ಜಾತ್ರೆಯ ಮೊದಲು ಮತ್ತು ಜಾತ್ರೆಯ ನಂತರ ಮೈಲಾರದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ, ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ಸೂಚನೆ ಕೊಡಲಾಗಿದೆ ಎಂದು ಹೇಳಿದರು

ಮೈಲಾರ ಗ್ರಾಮಸ್ಥರು ಹಣ್ಣು-ಕಾಯಿ, ಕುಂಕುಮ, ಬಳೆ, ವ್ಯಾಪಾರ ಮಾಡುತ್ತಿದ್ದರೆ ಅವರಿಗೆ ಯಾವುದೇ ರೀತಿ ತೊಂದರೆ ಕೊಡದಂತೆ ದೇವಸ್ಥಾನದ ಇ.ಓ. ಪ್ರಕಾಶ್ ರಾವ್ ಅವರಿಗೆ ಸೂಚಿಸಿದರು.

ವಂಶಪಾರಂಪರ್ಯ ಧರ್ಮಕರ್ತ ಶ್ರೀಗುರು ವೆಂಕಪ್ಪಯ್ಯ ಒಡೆಯರ್ ಸಾನಿಧ್ಯ ವಹಿಸಿದ್ದರು. ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಮಹೇಶ್ ಬಾಬು, ಸಹಾಯಕ ಆಯುಕ್ತ ಚಂದ್ರಶೇಖರಯ್ಯ ತಹಶೀಲ್ದಾರ್ ಮಹೇಂದ್ರ ಇಒ ಪ್ರಭು ರೆಡ್ಡಿ, ಮಾಜಿ ಶಾಸಕ ಎಸ್.ಎನ್. ಪಾಟೀಲ, ಪುರಸಭೆ ಅಧ್ಯಕ್ಷ ವಾರದ ಗೌಸ್, ಟಿಎಪಿಸಿಎಂಎಸ್ ಅಧ್ಯಕ್ಷ ಬಸನಗೌಡ, ಹಿರಿಯ ವಕೀಲ ಎಂ ಪರಮೇಶ್ವರಪ್ಪ, ಅಟವಾಳಿಗಿ ಕೊಟ್ರೇಶ್, ಗ್ರಾ.ಪಂ ಅಧ್ಯಕ್ಷೆ ಮೊದಲಾದವರು ಉಪಸ್ಥಿತರಿದ್ದರು. ದೇವಸ್ಥಾನದ ಇ.ಓ. ಎಂ.ಎಚ್ ಪ್ರಕಾಶ್‌ರಾವ್ ಸಭೆಯಲ್ಲಿ ಭಾಗವಹಿಸಿದ್ದರು.

## ರಾಣೇಬೆನ್ನೂರಿನಲ್ಲಿ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರಿನ ಮೃತ್ಯುಂಜಯ ನಗರ 6 ರಿಂದ 12 ನೇ ಕ್ರಾಸ್‌ವರೆಗೂ, ವಿಕಾಸ ನಗರ, ವಾಜಪೇಯ ಪಾರ್ಕ್, ಗುರನ್ನಿ ಚಾಳ, ಹೆಚ್.ಪಿ.ಗ್ಯಾಸ್ ಗೋಡೌನ್ ಹತ್ತಿರ ಮತ್ತು ಅನಂತರೆಡ್ಡಿ ಆಸ್ಪತ್ರೆ ಹತ್ತಿರ ದಿನಾಂಕ 10 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

### ಓದುಗರ ಪತ್ರ

## ಸರ್ಕಾರಿ ಆಸ್ಪತ್ರೆಗಳಲ್ಲಿ ಆಧಾರ್‌ನಂತಹ ಮೂಲ ದಾಖಲೆ ಕೇಳುವುದು ಸರಿಯಲ್ಲ



ಮಾನ್ಯರೇ,

ಸರ್ಕಾರದ ಯಾವುದೇ ಸೇವೆ ಮತ್ತು ಸೌಲಭ್ಯವನ್ನು ಪಡೆದುಕೊಳ್ಳಲು ಎಲ್ಲದಕ್ಕೂ ಆಧಾರ್ ಕಾರ್ಡ್ ಕಡ್ಡಾಯ ಮಾಡಿದೆ ಸರಿ. ಇದಕ್ಕೆ ಸರ್ಕಾರಿ ಆಸ್ಪತ್ರೆಗಳು ಕೂಡ ಹೊರತಾಗಿಲ್ಲ.

ಇಲ್ಲಿ ಯಾವುದೇ ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳಲು ಮೂಲ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ತರಬೇಕು ಎಂಬ ನಿಯಮವಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಬರುವವರೆಲ್ಲರೂ ಶಕ್ತರು, ಹರೆಯ ವಯಸ್ಸಿನವರಾಗಿರುವುದಿಲ್ಲ, ಬದಲಾಗಿ ವಯೋವೃದ್ಧರು, ಅಶಕ್ತರು, ಅಂಗವಿಕಲರು, ಗರ್ಭಿಣಿ, ಬಾಣಂತಿಯರು ಇನ್ನೂ ಒಬ್ಬೊಬ್ಬರಾಗಿಯೇ ಬೇರೆ ಊರುಗಳಿಂದ ಬರುವುದು ಉಂಟು. ಬೇರೆ ಬೇರೆ ದೂರದ ಊರುಗಳಿಂದ ಆಸ್ಪತ್ರೆಗೆ ಬರುವ ಮಾರ್ಗ ಮಧ್ಯೆಯೇ ಅಥವಾ ಆಸ್ಪತ್ರೆಯ ಜನಸಂದಣಿಯಲ್ಲಿಯೇ ಮೂಲ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಕಳೆದು ಹೋದರೆ ಯಾರು ಜವಾಬ್ದಾರಿ?

ಇಂದಿನ ಆಧುನಿಕ ತಂತ್ರಜ್ಞಾನದ ಯುಗದಲ್ಲೂ ಮೂಲ ದಾಖಲಾತಿಗಳನ್ನು ಕೇಳುವುದು ನಿಜಕ್ಕೂ ಹಾಸ್ಯಾಸ್ಪದ ಎನಿಸುತ್ತದೆ. ಕಂಪ್ಯೂಟರ್‌ನಲ್ಲಿ ಅವರ ನೋಂದಣಿ ಸಂಖ್ಯೆ ನಮೂದಿಸಿದರೆ ಫಲಾನುಭವಿಯ ಊರು, ಹೆಸರು,ವಯಸ್ಸು ಎಲ್ಲಾ ವಿವರಗಳು ಗೊತ್ತಾಗುತ್ತದೆಯಲ್ಲವೇ?

**- ಡಿ.ಮುರುಗೇಶ, ದಾವಣಗೆರೆ.**

## ಉಡುಗೆಯಿಂದ ಉದ್ರೇಕ ಎಂದು ಕ್ಷಮೆ ಯಾಚಿಸಿದ ರೇಣುಕಾಚಾರ್ಯ

ನವದೆಹಲಿ, ಫೆ. 9 - ಮಹಿಳೆಯರು ಧರಿಸುವ ಕೆಲ ಉಡುಪುಗಳು ಪುರುಷರನ್ನು ಉದ್ರೇಕಗೊಳಿಸುತ್ತವೆ. ಇದರಿಂದ ಅತ್ಯಾಚಾರಗಳು ಹೆಚ್ಚಾಗುತ್ತಿವೆ ಎಂದು ಶಾಸಕ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ನವದೆಹಲಿಯಲ್ಲಿ ಪತ್ರಕರ್ತರ ಜೊತೆ ಮಾತನಾಡುತ್ತಾ ರೇಣುಕಾಚಾರ್ಯ ನೀಡಿರುವ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ.

ನಂತರ ಸ್ಪಷ್ಟನೆ ನೀಡಿರುವ ರೇಣುಕಾಚಾರ್ಯ, ಪ್ರಿಯಾಂಕ ಗಾಂಧಿ ವಾದ್ರಾ ಅವರು ಬಿಕಿನಿ ಎಂಬ ಪದ ಬಳಸಿದ್ದಕ್ಕೆ ನಾನು ಆಕ್ಷೇಪಿಸುತ್ತಾ ಈ ಹೇಳಿಕೆ ನೀಡಿದ್ದೇನೆ. ಅವರು ಮಹಿಳೆಯಾಗಿ ಬಿಕಿನಿ ಎಂಬ ಶಬ್ದ ಬಳಸಬಾರದಿತ್ತು ಎಂದಷ್ಟೇ ಹೇಳಿದ್ದೇನೆ ಎಂದಿದ್ದಾರೆ.

ಮಹಿಳೆಯರ ಬಗ್ಗೆ ನನಗೆ ಅಪಾರ ಗೌರವ ಇದೆ. ಮಹಿಳೆ ಭಾರತ ಮಾತೆಯಷ್ಟೇ ಪವಿತ್ರರು, ತಾಯಿ ಸಮಾನ, ಭಾರತ ಮಾತೆಯ ಮಕ್ಕಳು ಎಂದಿದ್ದೇನೆ ಎಂದಿದ್ದಾರೆ.

ಪ್ರಚೋದನಕಾರಿ ಉಡುಗೆಯಿಂದ ಕೆಲವೊಂದು ಘಟನೆಗಳು ನಡೆದಿವೆ ಎಂದಷ್ಟೇ ನಾನು ಹೇಳಿದ್ದೇನೆ.

ನಾನು ತಪ್ಪು ಅರ್ಥ ಬರುವ ರೀತಿಯಲ್ಲಿ ಹೇಳಿಲ್ಲ. ತಪ್ಪಾಗಿದ್ದರೆ ಕ್ಷಮೆ ಕೇಳುತ್ತೇನೆ ಎಂದವರು ಹೇಳಿದ್ದಾರೆ.

## ಮಲೇಬೆನ್ನೂರಿನಲ್ಲಿ ಸವಿತಾ ಮಹರ್ಷಿಗಳ ಜಯಂತಿ



ಮಲೇಬೆನ್ನೂರು, ಫೆ. 9- ಇಲ್ಲಿನ ಪುರಸಭೆ ಮತ್ತು ನಾಡ ಕಛೇರಿಯಲ್ಲಿ ಸವಿತಾ (ಕ್ಷೌರಿಕ) ಸಮಾಜದ ಮೂಲ ಪುರುಷರಾದ ಸವಿತಾ ಮಹರ್ಷಿಗಳ ಜಯಂತಿ ಆಚರಿಸಲಾಯಿತು. ಉಪ ತಹಶೀಲ್ದಾರ್ ಆರ್. ರವಿ ಮತ್ತು ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ಅವರು ಸವಿತಾ ಮಹರ್ಷಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ನಾಡ ಕಛೇರಿಯ ಪುಷ್ಪಾ ಹಿರೇಮಠ, ಅಂಜಿನಪ್ಪ, ಮಾರುತಿ, ಸವಿತಾ ಸಮಾಜದ ಅಧ್ಯಕ್ಷ ಬಸವರಾಜ್, ಗೌರವಾಧ್ಯಕ್ಷ ಕೆ.ಬಿ. ಶ್ರೀನಿವಾಸ್, ಎನ್.ಎಸ್. ಆಂಜನೇಯ, ಪಿ.ಟಿ. ಶಂಕರ್‌ಬಾಬು, ಪ್ರಭಾಕರ್, ಸತೀಶ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಕೆ.ಜಿ. ಲೋಕೇಶ್, ಬಿ. ಮಂಜುನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ಸಾಬೀರ್ ಜಯಸಿಂಹ, ಮಹ್ಮದ್ ನಯಾಜ್, ನಾಮಿನಿ ಸದಸ್ಯ ಪಿ.ಆರ್. ರಾಜು, ಮಾಜಿ ಸದಸ್ಯ ಬಿ. ಸುರೇಶ್, ಎಂ.ಬಿ. ರುಸ್ತುಂ, ಓ.ಜಿ. ಕುಮಾರ್, ದಾದಾವಲಿ, ಚಮನ್ ಷಾ, ಎಸ್.ಜಿ. ಹಾಲೇಶಪ್ಪ, ಜಿಗಳಿಯ ಕೆ.ಎಂ. ರಾಮಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


## ಮೈಸೂರು ಪಾಲಿಕೆ ಮಾಜಿ ಸದಸ್ಯ ಅಯೂಬ್ ಖಾನ್ ವಿರುದ್ಧ ಕ್ರಮಕ್ಕೆ ಆಗ್ರಹ



ದಾವಣಗೆರೆ, ಫೆ. 9- ಭಗವಾನ್ ಗೊಮ್ಮಟೇಶ್ವರ ದೇವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಮೈಸೂರಿನ ಮಹಾನಗರ ಪಾಲಿಕೆ ಮಾಜಿ ಸದಸ್ಯ ಅಯೂಬ್ ಖಾನ್ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ನಗರದ ಶ್ರೀ ಮಹಾವೀರ ಸಂಘ ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕರಿಗೆ ಮನವಿ ಸಲ್ಲಿಸಿದೆ.

ದಿಗಂಬರ ಜೈನ ಸಮಾಜದವರ ಭಾವನೆಗಳಿಗೆ ಧಕ್ಕೆ ಉಂಟು ಮಾಡುವ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯ. ಸಮಾಜದ ಸ್ವಾಸ್ಥ್ಯ ಕೆಡಿಸುವ ದುರುದ್ದೇಶದಿಂದ ಹೇಳಿಕೆ ನೀಡಿದ್ದಾರೆಂದು ಸಂಘದ ಅಧ್ಯಕ್ಷ ಅಜಿತ್‌ಕುಮಾರ್ ದೂರಿದರು. ಸಂಘದ ಪದಾಧಿಕಾರಿಗಳಾದ ಸುನಿಲ್ ಕುಮಾರ್, ಪ್ರೀತಮ್, ಕೋಮಲ್, ರಾಜು ಮತ್ತಿತರರು ಭಾಗವಹಿಸಿದ್ದರು.

ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು
Most Popülr Astrologer



ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ದ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ
ಮೊಬೈಲ್ : 89716 99826



## ಆಕಾಶವಾಣಿಯಲ್ಲಿ ಇಂದು ಹೆಲ್ಪ್‌ಲೈನ್ ಸುಭಾನ್

ದಾವಣಗೆರೆ ಹೆಲ್ಪ್‌ಲೈನ್ ರೂರಲ್ ಡೆವಲಪ್‌ಮೆಂಟ್ ಆರ್ಗನೈಜೇಷನ್ ಕಾರ್ಯದರ್ಶಿ ಹೆಲ್ಪ್‌ಲೈನ್ ಸುಭಾನ್ ಅವರು ಹಿರಿಯ ನಾಗರಿಕರ ಕುರಿತು ಮಾತನಾಡಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ರಿಂದ 11.30 ರ ವರೆಗೆ ಭದ್ರಾವತಿ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗಲಿದೆ ಎಂದು ಸಂಸ್ಥೆ ಅಧ್ಯಕ್ಷರಾದ ಶ್ರೀಮತಿ ಡಿ.ಎಂ. ಹಂಸ ತಿಳಿಸಿದ್ದಾರೆ.



## ನಗರಕ್ಕೆ ಇಂದು ರಾಹುಲ್ ಸತೀಶ್ ಜಾರಕಿಹೊಳಿ

ಶಾಸಕ ಸತೀಶ್ ಜಾರಕಿಹೊಳಿ ಅವರ ಪುತ್ರ ರಾಹುಲ್ ಸತೀಶ್ ಜಾರಕಿಹೊಳಿ ಅವರು ನಾಯಕ ವಿದ್ಯಾರ್ಥಿ ನಿಲಯಕ್ಕೆ ಇಂದು ಬೆಳಿಗ್ಗೆ 11.30 ಕ್ಕೆ ಭೇಟಿ ನೀಡಲಿದ್ದಾರೆ ಎಂದು ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ ಕೋರಿದ್ದಾರೆ.






## ಡ್ರೋನ್ ಆಮದಿನ ಮೇಲೆ ನಿಷೇಧ

ನವದೆಹಲಿ, ಫೆ. 9 – ವಿದೇಶದಿಂದ ಡ್ರೋನ್‌ಗಳ ಆಮದು ಮಾಡಿಕೊಳ್ಳುವುದನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ದೇಶದಲ್ಲೇ ಡ್ರೋನ್ ಉತ್ಪಾದನೆಗೆ ಉತ್ತೇಜನ ನೀಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ, ರಕ್ಷಣೆ ಮತ್ತು ಸಂಶೋಧನೆ, ರಕ್ಷಣೆ ಹಾಗೂ ಭದ್ರತೆಗಳಿಗಾಗಿ ಡ್ರೋನ್ ಆಮದು ಮಾಡಿಕೊಳ್ಳಲು ಅವಕಾಶ ಮುಂದು ವರೆಯಲಿದೆ. ಡ್ರೋನ್ ಬಿಡಿ ಭಾಗಗಳ ಆಮದಿಗೂ ಅವಕಾಶ ಇರಲಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ಹೇಳಿದೆ.

## ಮಹೇಶ್ ರಾಯಚೂರು ಅವರಿಗೆ ಮಾತೃ ವಿಯೋಗ



ದಾವಣಗೆರೆ ಅಶೋಕ ರಸ್ತೆ - ಮಹಿಳಾ ಸಮಾಜ ರಸ್ತೆಯ 'ಆಶೀರ್ವಾದ', # 276/2ರ ವಾಸಿ

**ಶ್ರೀಮತಿ ಸುಮತಿ ನರಸಿಂಹ ರಾಯಚೂರ್**

ಅವರು ದಿನಾಂಕ 09.02.2022ರ ಬುಧವಾರ ಮಧ್ಯಾಹ್ನ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು.

ಸುಮತಿ, ಹಿರಿಯ ಕಲಾವಿದರಾಗಿದ್ದ ದಿ|| ನರಸಿಂಹ ರಾಯಚೂರ್ ಅವರ ಧರ್ಮಪತ್ನಿ ಮತ್ತು ದಾವಣಗೆರೆ ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಶ್ರೀ ಮಹೇಶ್ ರಾಯಚೂರ್ ಅವರ ತಾಯಿ. ನಾಲ್ವರು ಪುತ್ರರು, ಓರ್ವ ಪುತ್ರಿ, ಆರು ಜನ ಮೊಮ್ಮಕ್ಕಳು ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.2.2022ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ:

ಪುತ್ರರು: **ಗಿರೀಶ್, ಅಜಿತ್, ಮಹೇಶ್, ವಿನಾಯಕ**

ಪುತ್ರಿ: **ಶ್ರೀಮತಿ ಉಮಾ ಬಾರ್ಕೆರ (ಬೆಂಗಳೂರು)**

## ಐಗೂರು ಮಠದ ಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಐಗೂರು ಗ್ರಾಮದ ವಾಸಿ

**ಮಠದ ಬಸಪ್ಪ**

ಅವರು ದಿನಾಂಕ 09.02.2022ರ ಬುಧವಾರ ಸಂಜೆ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ಪತ್ನಿ, ಐವರು ಪುತ್ರರು,ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.2.2022ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಐಗೂರಿನಲ್ಲಿ ನೆರವೇರಿಲಾಗುವುದು.

**ದುಃಖತಪ್ತ ಕುಟುಂಬ ವರ್ಗ:**

ಮೊ: 98807 33569, 99008 92916, 95358 50805

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ **ಸಂದೀಪ್ ಜಿ.ಎನ್.. ಬಿನ್ . ನಾಗರಾಜ್ ಜಿ.ಎಸ್.** ಇವರು ಪರಿಶಿಷ್ಟದಲ್ಲಿ ವಿವರಿಸಿರುವ ಸ್ವತ್ತನ್ನು ದಿ|| ಗಜಾನನ ವಾಸುದೇವ ವರ್ಣೇಕರ್ ಇವರ ಮಗಳಾದ ಶ್ರೀಮತಿ ಸುಮನ ಗಣೇಶ್ ರಾವ್ ಕೋಂ ಗಣೇಶ್ ರಾವ್ ಇವರಿಂದ ಕ್ರಯಕ್ಕೆ ಪಡೆಯುವ ಉದ್ದೇಶ ಹೊಂದಿರುತ್ತಾರೆ. ಸದರಿ ಸ್ವತ್ತು ಮೂಲತಃ ಸಂಗಪ್ಪನವರ ಮಕ್ಕಳಾದ ಶ್ರೀಯುತರುಗಳಾದ ರುದ್ರಪ್ಪ ಹಾಗೂ ಬಸವರಾಜಪ್ಪ ಇವರಿಗೆ ಸೇರಿದ ಸ್ವತ್ತಾಗಿರುತ್ತದೆ. ಸದರಿಯವರು ಪರಿಶಿಷ್ಟ ಸ್ವತ್ತನ್ನು ದಾವಣಗೆರೆ ಉಪನೋಂದಣಾಧಿಕಾರಿಗಳವರ ನಂ. 2121, ದಿನಾಂಕ 21.07.1966ರ ನೋಂದಾಯಿತ ಕ್ರಯಪತ್ರದಡಿಯಲ್ಲಿ ಖರೀದಿಸಿರುತ್ತಾರೆ. ನಂತರ ಸದರಿಯವರು ತಮ್ಮ ಹಕ್ಕುದಾರಿ ಸ್ವಾಧೀನದಲ್ಲಿರುವ ಸ್ವತ್ತನ್ನು ಶ್ರೀಮತಿ ರಾಧಾಬಾಯಿ ಕೋಂ ನಾಗೇಶ್ ಶೇಟ್ ಇವರಿಗೆ ದಿನಾಂಕ 23.06.1984ರ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ನಂತರ ಸದರಿ ಶ್ರೀಮತಿ ರಾಧಾಬಾಯಿ ಕೋಂ ನಾಗೇಶ್ ಶೇಟ್ ಇವರು ಪರಿಶಿಷ್ಟ ಸ್ವತ್ತನ್ನು ದಿ|| ಗಜಾನನ ವಾಸುದೇವ ವರ್ಣೇಕರ್ ಇವರ ಮಕ್ಕಳಾದ ಶ್ರೀಯುತ ಉದಯ ಗಜಾನನ ವರ್ಣೇಕರ್ (ಉದಯ. ಜಿ.ವಿ) ಹಾಗೂ ಶ್ರೀ ಮಂಜುನಾಥ ಗಜಾನನ ವರ್ಣೇಕರ್ ಇವರುಗಳಿಗೆ ಕ್ರಮವಾಗಿ ದಿನಾಂಕ 27.08.1994ರ ಶುದ್ಧ ಕ್ರಯಪತ್ರಗಳಡಿಯಲ್ಲಿ ಮಾರಾಟ ಮಾಡಿರುತ್ತಾರೆ. ಸದರಿ ಸ್ವತ್ತು ಶ್ರೀ ಉದಯ ಗಜಾನನ ವರ್ಣೇಕರ್ ಹಾಗು ಶ್ರೀ ಮಂಜುನಾಥ ಗಜಾನನ ವರ್ಣೇಕರ್ ಮತ್ತು ಧನಂಜಯ ಗಜಾನನ ವರ್ಣೇಕರ್ ಇವರ ಒಟ್ಟು ಕುಟುಂಬದ ಸ್ವತ್ತಾಗಿದ್ದು ಸದರಿ ಸ್ವತ್ತನ್ನು ಅವರು ದಿನಾಂಕ 27.07.2016ರ ನೋಂದಾಯಿತ ಹಕ್ಕು ಖುಲಾಸೆ ಪತ್ರದ ಮೂಲಕ ಅವರ ಸಹೋದರಿ ಶ್ರೀಮತಿ ಸುಮನ ಗಣೇಶ್ ರಾವ್ ಕೋಂ ಗಣೇಶ್ ರಾವ್ ಇವರಿಗೆ ಕೊಟ್ಟಿರುತ್ತಾರೆ. ಸದರಿ ಹಕ್ಕು ಖುಲಾಸೆ ಪತ್ರದ ಹಿನ್ನೆಲೆಯಲ್ಲಿ ಶ್ರೀಮತಿ ಸುಮನ ಗಣೇಶ್ ರಾವ್ ಕೋಂ ಗಣೇಶ್ ರಾವ್ ಇವರು ಪರಿಶಿಷ್ಟ ಸ್ವತ್ತಿನ ಸಂಪೂರ್ಣ ಮಾಲೀಕರು ಹಾಗೂ ಹಕ್ಕುದಾರರು ಆಗಿರುತ್ತಾರೆ. ಸದರಿ ಶ್ರೀಮತಿ ಸುಮನ ಗಣೇಶ್ ರಾವ್ ಕೋಂ ಗಣೇಶ್ ರಾವ್ ಇವರು ಪ್ರಸ್ತುತ ಪರಿಶಿಷ್ಟ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಇಚ್ಛೆ ಹೊಂದಿರುತ್ತಾರೆ.

ಆದುದರಿಂದ ಸದರಿ ಖರೀದಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾರದಾದರೂ ತಕರಾರು ಇದ್ದಲ್ಲಿ ಅದಕ್ಕೆ ಸಂಬಂಧಿಸಿದ ದಾಖಲಾತಿಯೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ ಏಳು ದಿನಗಳ ಒಳಗಾಗಿ ಸಂಜೆ 6.30 ರಿಂದ ರಾತ್ರಿ 10.30 ರ ಸಮಯದಲ್ಲಿ ಕೆಳಗೆ ನಮೂದಿಸಿದ ನ್ಯಾಯವಾದಿಗಳ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು, ಏಳು ದಿನಗಳ ನಂತರ ಬಂದಂತಹ ದಾಖಲಾತಿಗಳನ್ನು/ತರಕರಾರುಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ಏಳು ದಿನಗಳ ಒಳಗಾಗಿ ಯಾವುದೇ ತಕರಾರು ಬರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರದ್ದೂ, ಯಾವುದೇ ಬಗೆಯ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತನ್ನು ಖರೀದಿಸಲಾಗುವುದು.

### ಪರಿಶಿಷ್ಟ

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ರವರ ಆಫೀಸಿನ ಅಧಿಕಾರಿಕ್ಕೆ ಒಳಪಟ್ಟ, ದಾವಣಗೆರೆ ಸಿಟಿ, 5ನೇ ವಾರ್ಡ್, 9ನೇ ಡಿವಿಜನ್ (ಚಾಲ್ತಿ ವಾರ್ಡ್ ಸಂಖ್ಯೆ 32) ಎಂ.ಸಿ.ಸಿ. ಬಿ. ಬ್ಲಾಕ್‌ನಲ್ಲಿ ಬರತಕ್ಕ ಸೈಟ್ ನಂ. 231 ( ಎರಡು ನೂರಾ ಮೂವತ್ತೊಂದು) ಇದರ ಪೂರಾ ಅಳತೆ 60x44 ಅಡಿ ಇದ್ದು, ಈ ಪೈಕಿ ಉದಯ ಗಜಾನನ ವರ್ಣೇಕರ್ ಇವರ ಹೆಸರಿಗೆ ಇರುವ ಉತ್ತರ ಭಾಗದ ಚಾಲ್ತಿ ಡೋರ್ ನಂ. 2812/1 ಇದರ ಅಳತೆ 60x22 ಮತ್ತು ಮಂಜುನಾಥ ಗಜಾನನ ವರ್ಣೇಕರ್ ಇವರ ಹೆಸರಿಗೆ ಇರುವ ದಕ್ಷಿಣ ಭಾಗದ ಚಾಲ್ತಿ ಡೋರ್ ನಂ. 2812/2 ಇದರ ಅಳತೆ 60x22 ಅಡಿವುಳ್ಳ ಖಾಲಿ ಜಾಗ ಈ ಎರಡು ಜಾಗಗಳು ಒಂದಕ್ಕೊಂದು ಲಗತ್ತಾಗಿದ್ದು ಒಟ್ಟು ಅಳತೆ 60x44 ಅಡಿ ಉಳ್ಳ ನಿವೇಶನಕ್ಕೆ ಚಕ್ಕುಬಂದಿ: **ಪೂರ್ವಕ್ಕೆ**: ಮುಖ್ಯರಸ್ತೆ **ಪಶ್ಚಿಮಕ್ಕೆ**: ಕನ್ಸರ್‌ವೆನ್ಸಿ **ಉತ್ತರಕ್ಕೆ**: ಸೈಟ್ ನಂ. 230 **ದಕ್ಷಿಣಕ್ಕೆ**: ಸೈಟ್ ನಂ. 232

**ಸಂಪರ್ಕಿಸಬೇಕಾದ ವಿಳಾಸ:**


**ಸ್ವಾಮಿ ಕೆ.ಜಿ.ಕೆ., ಎಸ್.ಜಿ. ಮಹಾವೀರ್,** ನ್ಯಾಯವಾದಿಗಳು

ನಂ. 417/4ಎ, 4ಬಿ, 'ಲಾ ಸಲ್ಯೂಷನ್ಸ್'

1ನೇ ಮಹಡಿ, ಬೆನಕೇಶ್ ಪ್ಲಾಜಾ, ಜನತಾವಾಣಿ ಕಛೇರಿ ಎದುರು, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.

**ಮೊ: 98444 13266, 98450 03326**

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಹಿರಿಯ ವಕೀಲರೂ, ನಮ್ಮ ಸಂಸ್ಥೆಯ ಉಪಾಧ್ಯಕ್ಷರೂ ಆದ

**ಶ್ರೀ ನವಲ್‌ಮಲ್ ಪ್ಯಾರಜ್‌ಮಲ್‌ಜೀ**

ಅವರು ದಿನಾಂಕ 08.02.2022ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಶ್ರೀ ನಾಗೇಶ್ವರ ಪಾರ್ಶ್ವ ಭೈರವ ಧಾಮ್**

**ಆವರಗೆರೆ, ದಾವಣಗೆರೆ.**






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte